ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿದೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಧರ್ಮಸಿಂಗ್‌ಃ- (ಕಂದಾಯ ಮಂತ್ರಿ) ಮಾನ್ಯ ಅಧ್ಯಕ್ಷರೇ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿದೇಯಕ 1994ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರುಃ- ಪ್ರಸ್ತಾಪ ಏನೆಂದರೆ ''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕ 1994ನ್ನು ಅಂಗೀಕರಿಸುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(4) ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿದೇಯಕ, 1994

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಧರ್ಮಸಿಂಗ್‌ಃ- (ಕಂದಾಯ ಮಂತ್ರಿ) ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಭೂಕಂದಾಯ (ತಿದ್ದುಪಡಿ) ವಿಧೇಯಕ, 1994ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

6.00 ಪಿ.ಎಂ

* ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು)ಃ- ಮಾನ್ಯ ಸಭಾಪತಿಗಳೇ, ಈಗ ಕರ್ನಾಟಕ 1964ರ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ 94ರಲ್ಲಿ ತಿದ್ದುಪಡಿಯನ್ನುತರುತ್ತಾ ಇದ್ದೇವೆ. ಈಗ 1991ರಲ್ಲಿ ಎಲ್ಲಾ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುವ ಬಗ್ಗೆ ಅರ್ಜಿ ಸಲ್ಲಿಸಲು ಹೇಳಿದ್ದೆವು. ಇದರ ಪ್ರಕಾರ 10 ಲಕ್ಷದ 86 ಸಾವಿರ ಅರ್ಜಿಗಳು ನಮ್ಮ ಮುಂದೆ ಇವೆ. ನಾನು

ಕಂದಾಯ ಮಂತ್ರಿಯಾದ ಮೇಲೆ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ಎಷ್ಟು ಅರ್ಜಿಗಳು ವಿಲೇವಾರಿಯಾಗಿವೆ ಎಂಬುದರ ಬಗ್ಗೆ ಕೂಡ ನಾವು ಪರಿಶೀಲನೆ ಮಾಡಿದ್ದೇವೆ. ಇವತ್ತು ನಾವು ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಯಲ್ಲಿ ಕುಳಿತಾಗ, ಇವತ್ತು ಕೆಲವು ಪವರ್ಸ್‌ನ್ನು ಕೂಡ ಡೆಲಿಗೇಟ್ ಮಾಡಬೇಕಾಗಿದೆ. ಈಗ ಸಾಗುವಳಿ ಚೀಟಿಯನ್ನು ಕೊಡುವಾಗ ಮೊದಲು ಡೆಪ್ಯೂಟಿ ಕಮೀಷನರ್ ಅವರು ಇದ್ದರು. ಆದರೆ ಅವರಿಗೆ ಸಾಕಷ್ಟು ಕೆಲಸ ಕಾರ್ಯಗಳು ಇದ್ದಕಾರಣ ಇದು ಸುಲಭವಾಗುತ್ತಿರಲಿಲ್ಲ, ಆದ್ದರಿಂದ ನಾವು ಈಗ ತಹಸೀಲ್ದಾರ್‌ರಿಗೆ ಪವರ್ಸ್‌ನ್ನು ಡೆಲಿಗೇಟ್ ಮಾಡಿದ್ದೇವೆ. ಮತ್ತೆ ಲ್ಯಾಂಡ್‌ಗ್ರ್ಯಾಂಟ್ ಮಾಡಿದ ಮೇಲೆ ಲ್ಯಾಂಡ್ ಪ್ರೈಸ್ ಏನಿತ್ತು, ಅದರ ಇನ್ನೂರು ಪಟ್ಟು ಕೊಡಬೇಕಾಗಿತ್ತು. ಅದನ್ನು ನಾವು ಈಗ ಇನ್ನೂರು ಪಟ್ಟಿನಿಂದ ಐವತ್ತುಪಟ್ಟು ಎಂದು ಮಾಡಿದ್ದೇವೆ. ಮತ್ತು ಲ್ಯಾಂಡ್ ಪ್ರೈಸ್ ಕೂಡ ಮೊದಲು ಮೂವತ್ತು ದಿವಸಗಳಿಗೆ ಮೊದಲು ಕೊಟ್ಟರೆ ಮಾತ್ರ ಸಾಗುವಳಿ ಚೀಟಿ ಕೊಡಬೇಕೆಂದು ಇತ್ತು. ಮತ್ತು ಕೊಡಲಾರದೇ ಇದ್ದರೂ ಅದನ್ನು ಕೊಡಬೇಕೆಂಬ ಪ್ರಾವಿಷನ್ ಅನ್ನು ನಾವು ಈಗ ಮಾಡಿದ್ದೇವೆ. ಇವತ್ತು ಪ್ರಸ್ತುತ ಇರತಕ್ಕಂಥ ರೆಗ್ಯುಲರೈಸೇಷನ್ ಕಮಿಟಿ ಏನಿದೆ, ಇರತಕ್ಕಂಥ ಅಪ್ಲಿಕೇಷನ್‌ಗಳಲ್ಲಿ ನಾವು ಈಗಾಗಲೇ ಟಾರ್ಗೆಟ್ ಅನ್ನು ಕೊಟ್ಟಿದ್ದೇವೆ. ಇದನ್ನು ಸೆಪ್ಟೆಂಬರ್ ಒಳಗೆ ಮಾಡಬೇಕೆಂದು ನಮ್ಮ ಸರ್ಕಾರದ ಧೋರಣೆ ಇದೆ. ಏಕೆಂದರೆ ಇಪ್ಪತ್ತು ವರ್ಷಗಳಿಂದಲೂ ಈ ರೆಗ್ಯುರಲೈಸೇಷನ್ ನಡೆಯುತ್ತಿತ್ತು. ಅದಕ್ಕೆ ಈಗ ಅಡಿಶನಲ್ ಕಮಿಟಿ ಮಾಡಬೇಕು ಅಂತ ಹೇಳಿ, 94ಎ ನಲ್ಲಿ ಆ ಪವರ್ಸ್‌ನ್ನು ತೆಗೆದುಕೊಂಡಿದ್ದೇವೆ. ಇದು ಬಹಳಷ್ಟು ಮಟ್ಟಿಗೆ ಬಡವರಿಗೆ ಸಹಾಯವಾಗತಕ್ಕಂಥ ರೀತಿಯಲ್ಲಿ ಒಳ್ಳೆಯ ಕಾರ್ಯಕ್ರಮ ಇದೆ. ಮೇಲ್ಮನೆಯಲ್ಲಿ ಕೂಡ ಇದಕ್ಕೆ ಮನ್ನಣೆಯನ್ನು ಕೊಟ್ಟಿದ್ದಾರೆ. ತಾವು ಕೂಡ ಇದಕ್ಕೆ ಮನ್ನಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಈಗ ನಾವು ತತ್ವಶಃ ಈ ಮಸೂದೆಗೆ ವಿರೋಧ ಮಾಡುತ್ತಿಲ್ಲ. ಏಕೆಂದರೆ ತಾವು ಡೀಸೆಂಟ್ರಲೈಸೇಷನ್ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೀರಿ. ಜಿಲ್ಲಾಧಿಕಾರಿಗಳಿಂದ ಸಾಗುವಳಿ ಚೀಟಿಯನ್ನು ಕೊಡುವ ಅಧಿಕಾರವನ್ನು ತಹಸೀಲ್ದಾರ್ ಅವರಿಗೆ ಕೊಡುತ್ತಿದ್ದೀರಿ. ಸಂತೋಷ. ಮತ್ತೆ ಇನ್ನೂರು ಪಟ್ಟು ಭೂಮಿಯ ಬೆಲೆ ನಿಗದಿಮಾಡುವುದು ಏನಿತ್ತು, ಅದನ್ನು ಈಗ ಐವತ್ತು ಪಟ್ಟಿಗೆ ಇಳಿಸಿದ್ದೀರಿ. ಆದರೆ ಇದು ರೆಟ್ರಾಸ್ಪೆಕ್ಟಿವ್ ಎಫೆಕ್ಟ್‌ನಿಂದ ಜಾರಿ ಆಗಬೇಕು. ಈಗಾಗಲೇ ಕೆಲವು ಪ್ರಕರಣಗಳಲ್ಲಿ ಏನಾಗಿದೆ ಎಂದರೆ, ನಾವು ನಿಕಾಲಿ ಮಾಡಿದ್ದೇವೆ ಮತ್ತು ಅವುಗಳ ಬೆಲೆ ಕೂಡ ನಿಗದಿಯಾಗಿದೆ. ಯಾವ ಪ್ರಕರಣಗಳು ಇತ್ಯರ್ಥವಾಗಿವೆ ಅವರು ಇನ್ನೂರುಪಟ್ಟು ಬೆಲೆ ಕೊಡಬೇಕೆಂದು ನೋಟೀಸ್ ಇಷ್ಯೂ ಆಗಿದೆ. ಈಗ ತಾವು 50 ಪರ್ಸೆಂಟ್ ಮಾಡಿದರೆ, ಕೆಲವು ಜನ ಇನ್ನೂ ಹಣ ಪಾವತಿ ಮಾಡಿಲ್ಲ, ಅವರಿಗೆ ನೋಟೀಸ್ ಇಷ್ಯೂ ಆಗಿದೆ. ಆವಾಗ ಅವರದ್ದು ಏನು ಪರಿಸ್ಥಿತಿಯಾಗುತ್ತದೆ ಎಂದು ತಾವು ವಿಚಾರ ಮಾಡಬೇಕಾಗುತ್ತದೆ. ತಾವು ಈಗ ಇದನ್ನು 200 ಪರ್ಸೆಂಟ್ ಮಾಡಿದ್ದೀರಿ, ಸಂತೋಷ. ಇದನ್ನು ಮಾಡಿ. ಇದರಿಂದ ಬಡವರಿಗೆ ಸಹಾಯವಾಗುತ್ತದೆ.

ಇದನ್ನು ನೀವು ಪುಕ್ಕಟೆ ಕೊಟ್ಟರೂ ಕೂಡ ನಮ್ಮ ತಕರಾರು ಇಲ್ಲ. ಆದರೆ ಇದು ರೆಟ್ರಾಸ್ಪೆಕ್ಟಿವ್ ಆಗಬೇಕು.

ಶ್ರೀ ಧರ್ಮಸಿಂಗ್ : - ಈಗ 200 ಟೈಮ್ಸ್ ಇದ್ದುದನ್ನು 50 ಟೈಮ್ಸ್‌ಗೆ ಇಳಿಸಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ :- ಈಗ 200 ಟೈಮ್ಸ್ ಇದ್ದುದನ್ನು 50 ಟೈಮ್ಸ್‌ಗೆ ಮಾಡುತ್ತಿದ್ದೀರಲ್ಲಾ, ಅದನ್ನು ರೆಟ್ರಾಸ್ಪೆಕ್ಟಿವ್ ಆಗಿ ಜಾರಿ ಮಾಡಿ. ಯಾವ ದಿನ ಈ ಮಸೂದೆ ಜಾರಿಗೆ ಬಂತೋ, ಆ ದಿವಸದಿಂದ ಆಗಬೇಕು. ಆದ್ದರಿಂದ ನಾನು ಹೇಳುತ್ತಿದ್ದೇನೆ, ಒಳ್ಳೆಯ ಕೆಲಸ ಮಾಡಿದ್ದೀರಿ. ಆದರೆ ಇದನ್ನು ರೆಟ್ರಾಸ್ಪೆಕ್ಟಿವ್ ಎಫೆಕ್ಟ್, ಯಾವಾಗ ಮಸೂದೆ ಜಾರಿಗೆ ಬಂದಿದೆಯೋ ಅವಾಗಿನಿಂದ ಮಾಡಿಯೆಂದು ನಾನು ಹೇಳುತ್ತಿದ್ದೇನೆ. ಎರಡನೇಯದು, ತಾವು ಒಂದು ಮಾತನ್ನು ಹೇಳಿದ್ದೀರಿ. ಕಮಿಟಿಯಲ್ಲಿ ಹತ್ತು ಲಕ್ಷ ಪ್ರಕರಣಗಳು ಬಾಕಿ ಉಳಿದಿವೆ ಎಂದು ಹೇಳಿದಿರಿ. ಸೆಪ್ಟೆಂಬರ್ ಒಳಗೆ ಮುಗಿಸಬೇಕೆಂದು ಏನು ಹೇಳಿದ್ದೀರಿ, ನಿಜ, ಇದನ್ನು ಮುಗಿಸಬೇಕು. ನಮ್ಮ ಕಾಲದಲ್ಲೇ ಈ ಬಿಲ್ ರೆಡಿಯಾಗಿತ್ತು. ನಮ್ಮ ದುರ್ದೈವದಿಂದ ಅದನ್ನು ಮೂವ್ ಮಾಡಲಿಕ್ಕೆ ಆಗಲಿಲ್ಲ. ನೀವು ಆದರ ಲಾಭವನ್ನು ಪದೆದುಕೊಂಡಿರಿ. ರೆಡಿಯಾಗಿದ್ದ ಬಿಲ್ ಅನ್ನು ಮಲ್ಲಿಕಾರ್ಜುನ ಖರ್ಗೆಯವರು ಮೂವ್ ಮಾಡಿದರು. ಬೊಮ್ಮಾಯಿ ಹೆಸರು ಬದಲು ಮಲ್ಲಿಕಾರ್ಜುನ ಖರ್ಗೆಯವರ ಹೆಸರು ಬಂತು. ಆಗಲಿ. ಸಂತೋಷ. ಪ್ರಶ್ನೆ ಏನಿದೆ ? ಇವತ್ತು ಕೆಲಸ ಯಾಕೆ ಆಗಿಲ್ಲ ? ಕೆಲಸ ಯಾಕೆ ಆಗಿಲ್ಲ ಎಂದರೆ ದೋಷ ನಿಮ್ಮಲ್ಲೇ ಇದೆ.

(ಮಾನ್ಯ ಸದಸ್ಯರಾದ ಶ್ರೀ ಜಿ. ರಾಜುಗೌಡ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಏಕೆಂದರೆ ಬಗರ್‌ಹುಕುಂ ಸಾಗುವಳಿ ಸಮಿತಿಗಳಿವೆಯಲ್ಲಾ, ಅದರಲ್ಲಿ 170-180 ಜನರನ್ನು ನಿಮ್ಮ ಶಾಸಕರು ಎಂದು ಸೇರಿಸಿದ್ದಾರೆ. ಆ ಶಾಸಕರು ಪ್ರತಿ ತಿಂಗಳು ಒಂದೆರಡು ಮೀಟಿಂಗ್‌ಗಳನ್ನು ಮಾಡಿದರೆ, ಎಲ್ಲಾ ಅರ್ಜಿಗಳು ಡಿಸ್‌ಪೋಸಲ್ ಆಗುತ್ತಿದ್ದವು. ಆದರೆ ಆ ರೀತಿ ಮಾಡದೆ ವಿಳಂಬವಾಗಿದ್ದರೆ ಅದರ ಅಪವಾದ ಇವತ್ತು ವಿರೋಧ ಪಕ್ಷಗಳ ಮೇಲೆ ಬರಬಾರದು. ಆ ಅಪವಾದ ಇವತ್ತು ನಿಮ್ಮ ಮೇಲೆಯೇ ಬರಬೇಕಾಗುತ್ತದೆ. ಹಾಗಾಗಿ ಆ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. ಕೇಸುಗಳು ಡಿಸ್‌ಪೋಸ್ ಆಗಿಲ್ಲವೆಂದರೆ ಅದು ನಿಮ್ಮಿಂದಾಗಿ ಆಗಿಲ್ಲ. ಎರಡನೆಯದಾಗಿ ತಾವು ಈಗ ಅಧಿಕಾರವನ್ನು ಹೆಚ್ಚಿನ ಸಮಿತಿಗಳನ್ನು ಮಾಡುವುದಕ್ಕೆ ತೆಗೆದುಕೊಳ್ಳುತ್ತಿದ್ದೀರಿ, ಈಗ ಸಮಯವಿಲ್ಲ; ಸೆಪ್ಟೆಂಬರ್‌ನಲ್ಲಿ ಚುನಾವಣೆಗೆ ಹೋಗುತ್ತೇವೆ. ಆದರೆ, ನಾನು ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಕೇವಲ ವಿರೋಧ ಪಕ್ಷದ ಸದಸ್ಯರು ಇದ್ದಾರಲ್ಲಾ, ಅವರ ಮೆಂಬರ್‌ಶಿಪ್, ಚೇರ್ಮನ್‌ಶಿಪ್ ಅನ್ನು ತಪ್ಪಿಸಲಿಕ್ಕೆ ಅಲ್ಲೇ ಅಷ್ಟೇ ಮಾಡಬೇಡಿ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾತ್ರ ಮಾಡಬೇಕಾಗುತ್ತದೆ. ಮತ್ತು ನೀವು ಒಂದು ನಿರ್ಣಯವನ್ನು ಕೊಡಬೇಕಾಗುತ್ತದೆ. ಏನು ಸಮಿತಿಗಳಿವೆ, ಎಷ್ಟು ಸಮಯದವರೆಗೂ ಇರಬೇಕೂ ಎಷ್ಟು ಸದಸ್ಯರಿರಬೇಕು ? ಒಂದು ಬಗರ್‌ಹುಕುಂ ಸಮಿತಿ ಮುಂದೆ ಸಾವಿರ ಪ್ರಕರಣಗಳು ಇರಬಹುದು, ಅವರು ಅಷ್ಟೇ ನೋಡಬೇಕಾಗುತ್ತದೆ, ಅವರಿಗೆ

ಅಷ್ಟೇ ಜವಾಬ್ದಾರಿ ಹಾಕಬೇಕಾಗುತ್ತದೆ. ಅದಕ್ಕೆ ಒಂದು ಸ್ಕೇಲ್ ಹಾಕಿ ಅದರಂತೆ ನೀವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

* ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೇ, 94 (ಎ)ಗೆ ಏನು ತಿದ್ದುಪಡಿ ತರುತ್ತಿದ್ದಾರೆ, ಅಡಿಶನಲ್, ಕಮಿಟಿಗಳನ್ನು ಮಾಡತಕ್ಕಂಥಾದ್ದು, ಆದರೆ ಈ ಕಮಿಟಿ ಮಾಡಿದರೆ ತೀರ್ಮಾನವಾಗುತ್ತದೆ ಎನ್ನತಕ್ಕಂಥ ಕಲ್ಪನೆಯಿದೆಯಲ್ಲಾ, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈಗ ನನ್ನ ಕ್ಷೇತ್ರದಲ್ಲಿ 10,246 ಅರ್ಜಿಗಳು ಬಂದಿವೆ. ಮಲೆನಾಡು ಪ್ರದೇಶದಲ್ಲಿ ಏನಾಗಿದೆಯೆಂದರೆ, ಅರಣ್ಯ ಇಲಾಖೆಯ ಸಂಪೂರ್ಣವಾದ ಮೈನರ್ ಫಾರೆಸ್ಟ್, ನಮಗೆ ಒಂದು ಎಕರೆ ಭೂಮಿಯನ್ನು ಕೊಡ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇಲ್ಲಿ ವಿಳಂಬವಾಗುವುದಕ್ಕೆ ಕಾರಣ ಏನು ಎಂದು ಕೇಳಿ ನಾನು ಮಾನ್ಯ ಧರ್ಮಸಿಂಗ್ ಅವರಿಗೆ ಪತ್ರ ಬರೆದಿದ್ದೆ. ಆ ಪತ್ರಕ್ಕೆ ಇದುವರೆಗೂ ನಿಮ್ಮಿಂದ ಉತ್ತರ ಬಂದಿಲ್ಲ. ಮುಖ್ಯಮಂತ್ರಿಗಳು ಸಾರ್ವಜನಿಕ ಸಭೆಗಳಲ್ಲಿ ; ಈ ಕಾಡು ಮತ್ತು ಸೊಪ್ಪಿನಬೆಟ್ಟ ಪ್ರದೇಶ ಇದೆಯಲ್ಲಾ, ಇದನ್ನು ಡಿ-ರಿಸರ್ವ್ ಮಾಡಿ ನಿಮಗೆ ಅಧಿಕಾರ ಕೊಡುತ್ತೇವೆ ಎಂದು ಹೇಳಿದರು. ಇದರ ಬಗ್ಗೆ ಇನ್ನೂ ನೋಟಿಫಿಕೇಷನ್ ಆಗಿಲ್ಲ. ಮೂರನೇಯದು, ರೂ. 8400 ಆರ್ಥಿಕ ಮಿತಿಯನ್ನು ಹಾಕಿದ್ದೀರಿ. ಈ ಮಿತಿಯನ್ನು ಹಾಕಿರುವುದರಿಂದ ನಾವು ಭೂಮಿಯನ್ನು ವಿತರಣೆ ಮಾಡುವುದಕ್ಕೆ ಆಗುತ್ತಾ ಇಲ್ಲ. ಈ ಮಿತಿಯನ್ನು ತೆಗೆಯುತ್ತೇವೆ ಎಂದು ಅನೇಕ ಸಾರಿ ಹೇಳಿದ್ದಾರೆ. ನಿಮಗೆ ಇದನ್ನು ಡಿಸ್‌ಪೋಸ್ ಮಾಡುವುದು ಬೇಕಲ್ಲಾ ? ನಿಮಗೆ ಹೇಳುತ್ತೇನೆ, ಇದರಲ್ಲಿ ಶೇಕಡಾ 90-95ರಷ್ಟು ಭಾಗ ಅರಣ್ಯ ಇಲಾಖೆಯ ಪ್ರದೇಶ. ಈ ಅರಣ್ಯ ಇಲಾಖೆಯ ಪ್ರದೇಶದಲ್ಲಿ ಒಂದು ಎಕರೆ ಭೂಮಿಯನ್ನೂ ಕೊಡುವುದಕ್ಕೆ ನಮಗೆ ಅಧಿಕಾರ ಇಲ್ಲ; ಈ ಸರ್ಕಾರಕ್ಕೂ ಇಲ್ಲ. ಇದು ಕನ್‌ಕರೆನ್ಸ್ ಲಿಸ್ಟಿನಲ್ಲಿ ಬರುವುದರಿಂದ ನೀವು ಕೇಂದ್ರಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು, ಅಷ್ಟೇ; ಆದರೆ ಕೊಡತಕ್ಕಂಥ ಅಧಿಕಾರ ನಮ್ಮ ರಾಜ್ಯಸರ್ಕಾರಕ್ಕೆ ಇಲ್ಲ. ಈ ಮೂರು ಕಾರಣಗಳನ್ನು ನಾನು ಹೇಳಿದೆ. ಒಂದನೆಯದು ಅರಣ್ಯ, ಕಾಡು ಮತ್ತು ಸೊಪ್ಪಿನ ಬೆಟ್ಟ, ಮತ್ತು ಆದಾಯದ ಮಿತಿ ಹಾಗೂ ಈ ಮೂರು ಎಕರೆ - ನಾಲ್ಕು ಎಕರೆ ಪ್ರದೇಶಕ್ಕೆ ದಾಮಾಷ ಮಾಡಿದ್ದೇವಲ್ಲಾ, ಎಲ್ಲಾಸೇರಿ ನಾಲ್ಕು ಎಕರೆ 30 ಗುಂಟೆಗೆ ನೀವು ಮಿತಿಗೊಳಿಸಿದ್ದೀರಿ. ಇದು ಯಾವ ಪ್ರದೇಶ? ನಮ್ಮ ರಾಗಿ ಬೆಳೆಯುವ ಜಾಗ. ಈಗ ಅದನ್ನು ರಿಲ್ಯಾಕ್ಸ್ ಮಾಡಿದ್ದೀರಿ ಎಂದು ಕೇಳಿದೆ. ಮತ್ತೆ ಬಹಳ ಮುಖ್ಯವಾಗಿ ಈಗ ನೀವು ಈ ಕಮಿಟಿಯನ್ನು ಶಾಸನಬದ್ಧವಾಗಿ ರಚನೆ ಮಾಡಿ ಮೀಟಿಂಗ್ ಮುಗಿಯುವುದರೊಳಗೆ ಎಲೆಕ್ಷನ್ ನೋಟಿಫಿಕೇಶನ್ ಬರುತ್ತದೆ. ಆಮೇಲೆ ಕಮಿಟಿ ಸಿಟ್ಟಿಂಗ್ಸ್ ಮಾಡುವ ಹಾಗಿಲ್ಲ. ಸುಮ್ಮನೆ ಯಾಕೆ ಈ ಎಕ್ಸರ್‌ಸೈಸ್ ನಿಮ್ಮದು? ಅದಕ್ಕಾಗಿ ಬಹಳ ಮುಖ್ಯವಾದುದು ಏನೆಂದರೆ, ಈ ಕಮಿಟಿ ಏನು ಮಾಡಿದ್ದೀರಿ, ಇದನ್ನು ಕಾಂಗ್ರೆಸ್ ಕಮಿಟಿ ಮಾಡಬೇಡಿ, ಬಗರ್‌ಹುಕುಂ ಕಮಿಟಿಯಾಗಿ ಮಾಡಿ. ನೀವು ಮಾಡುತ್ತಾ ಇರತಕ್ಕಂಥಾದ್ದು ಕಾಂಗ್ರೆಸ್ ಕಮಿಟಿ. ನಾವೇನೋ ಇದ್ದೇವೆ, ನಡೆಸಿಕೊಂಡು ಹೋಗುತ್ತೇವೆ. ವಿರೋದ ಪಕ್ಷದಿಂದ ನಾವು ಬರೆದ ಕಾಗದಕ್ಕೆ ನಿಮ್ಮಿಂದ ಉತ್ತರ ಬರುವುದಿಲ್ಲ. ಇದನ್ನೆಲ್ಲಾ ನಾವು ಶಾಸನಸಭೆಯಲ್ಲಿ

ಹೇಳುವ ಸ್ಥಿತಿಗೆ ತರುವುದು ಬೇಡ. ಕನಿಷ್ಟ ಒಬ್ಬಿಬ್ಬರನ್ನಾದರೂ ಅಲ್ಲಿ ಹಾಕಿ. ಈಗ ನಮಗೆ ಏನಾಗಿದೆ ಎಂದರೆ, ಮಾನ್ಯ ಸದಸ್ಯರಾದ ಶ್ರೀ ಸ್ವಾಮಿರಾವ್ ಅವರು ಇಲ್ಲಿಲ್ಲ. ನನ್ನದು ನಗರ ಎನ್ನತಕ್ಕಂಥ ಒಂದು ಹೋಬಳಿಯಲ್ಲಿ ಸೇರುತ್ತದೆ. ನಮಗೆ ಹೇಳುವ ಹಾಗಿಲ್ಲ, ಕೇಳುವ ಹಾಗಿಲ್ಲ. ತಹಸೀಲ್ದಾರರು ಅವರನ್ನು ಕಟ್ಟಿಕೊಂಡು ಭೂಮಿಯನ್ನು ಹಂಚುವುದು. ಕನಿಷ್ಟ ನಿಮ್ಮ ತಹಸೀಲ್ದಾರ್ ಅವರಿಗಾದರೂ ಬುದ್ಧಿ ಇರಬೇಕಾಗಿತ್ತು ಸಮಿತಿಯಲ್ಲಿ ನಮ್ಮ ಸದಸ್ಯರು ಯಾರನ್ನೂ ಹಾಕುವುದಿಲ್ಲವಲ್ಲಾ, ಅದನ್ನಾದರೂ ಕನಿಷ್ಟ ತಿಳಿಸಬಹುದಲ್ಲಾ? ನಿಮ್ಮದೇ ಕಾಂಗ್ರೆಸ್ ಸಮಿತಿ, ನನ್ನದು ಕ್ಷೇತ್ರ. ಆಮೇಲೆ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವುದು. ನೋಡಿ, ಚಂದ್ರೇಗೌಡರು ಭೂಮಿ ಕೊಡುವುದಕ್ಕೆ ವಿರೋಧ ಮಾಡುತ್ತಾರೆ ಎಂದು ನಾನು ಏಕೆ ವಿರೋಧ ಮಾಡಲಿ? ನಾನು ಪತ್ರ ಬರೆದಿದ್ದೇನೆ, ಏನೆಂದರೆ ನಾನು ಶಾಸಕ ಎನ್ನುವ ನೆನಪು ನಿಮಗೆ ಇರಬೇಕು. ಶಾಸಕರಲ್ಲಿ ಜಾತಿ, ಪಾರ್ಟಿ ತರಬೇಡಿ. ನನ್ನ ವಿರಿಯಾದಲ್ಲಿ ಕೊಡುವಾಗಲಾದರೂ ನನಗೆ ತಿಳಿಸಿ. ನಾನೂ ಬರುತ್ತೇನೆ, ಒಟ್ಟಿಗೆ ಹೋಗಿ ಕೊಡೋಣ. ನೀವೇಕೊಡಿ, ಸಂತೋಷ. ನಮ್ಮ ಕಡೆಯ ಒಬ್ಬರಾದರೂ ಸದಸ್ಯರು ಅಲ್ಲಿರಬೇಕಲ್ಲಾ? ಹೀಗೆ ಇಲ್ಲದೇ ಇರತಕ್ಕಂಥ ದ್ವಂದ್ವಗಳಿಂದಾಗಿ ಅಲ್ಲಿ ಒಂದು ರೀತಿಯಾದ ವಿಚಿತ್ರ ಪರಿಸ್ಥಿತಿಯ ನಿರ್ಮಾಣವಾಗಿದೆ. ಇದರ ಬಗ್ಗೆಯೂ ನಿಮಗೆ ಪತ್ರ ಬರೆದಿದ್ದೇನೆ. ನಮ್ಮ ಪತ್ರಗಳಿಗೆ ಬೆಲೆಯೂ ಇಲ್ಲ, ನಿಮ್ಮಿಂದ ಉತ್ತರವೂ ಬರುವುದಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಜವಾಬ್ದಾರಿ ವಹಿಸಿ. ನನ್ನದೇನೂ ಅಭ್ಯಂತರ ಇಲ್ಲ. ಅವರು ಮಾಡಿದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಸುಮ್ಮನೆ ಏಕೆ ಈ ದ್ವಂದ್ವಗಳನ್ನು ನಿರ್ಮಾಣ ಮಾಡುತ್ತೀರಿ ಆದ್ದರಿಂದ ಸಮಿತಿಗಳನ್ನು ಮಾಡುವಾಗ ಅವರನ್ನು ಕೇಳಿ ಮಾಡಿ. ಏಕೆಂದರೆ ಜಿಲ್ಲಾ ಮಂತ್ರಿಗಳು ಇದ್ದಾರೆ. I have belief in him. You do'nt understand our area you understand my difficulty. ದಯಮಾಡಿ ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಿ. ಗಮನದಲ್ಲಿಟ್ಟುಕೊಂಡು ಈ ಸಮಿತಿಗಳನ್ನು ಮಾಡಬೇಕು. ಈ ಸಮಿತಿಗಳು ರಚನೆಯಾಗಿ ಅದು ಬಿಲ್ ಆಗಿ ನೋಟೀಸ್‌ಗಳು ಹೋಗುವ ಹೊತ್ತಿಗೆ ಎಲೆಕ್ಷನ್ ಕಮೀಷನ್‌ರ್ ಶೇಷನ್‌ರವರು ನೋಟೀಸ್ ಕಳುಹಿಸಿರುತ್ತಾರೆ. ಅದು ತಮ್ಮ ಗಮನದಲ್ಲಿ, ಇರಲಿ ಎಂದು ನಾನು ಹೇಳುತ್ತೇನೆ.

* ಶ್ರೀ ಜೆ.ಸಿ. ಮಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):-ಮಾನ್ಯ ಅಧ್ಯಕ್ಷರೇ ಬಹುಶಃ ನಾನೂ ಕೂಡ ಸನ್ಮಾನ್ಯ ಮಂತ್ರಿಗಳಿಗೆ ಕಾಗದ ಬರೆದಿದ್ದೆ. ಈ ಸರ್ವೆಯರ್ಸ್ ಇಲ್ಲದೆ ಭಾರಿ ತೊಂದರೆ ಆಗಿದೆ, ನೀವು ಸ್ಕೆಚ್ ಮಾಡಿ, ಕಮಿಟಿ ಮುಂದೆ ಏನೂ ಡಿಸಿಷನ್ ತೆಗೆದುಕೊಂಡಿಲ್ಲ ಎಂದು ಹೇಳಿದಿರಿ ನಾನು ಕಾಗದ ಬರೆದಾಗ. ಕಮಿಟಿ ಮುಂದೆ ಯಾವುದೇ ಅಪ್ಲಿಕೇಷನ್ ಪೆಂಡಿಂಗ್ ಇಲ್ಲ ಸ್ವಾಮಿ, ಸರ್ವೆ ಮಾಡಿಸಿ ನಮಗೆ ಕಳುಹಿಸುವಷ್ಟು ಕೃಪೆ ಮಾಡುತ್ತೀರಾ ಎಂದು ಹೇಳಿ. ತಾವು ಇದರಲ್ಲಿ ಏನಾದರೂ ಬೆಳಕು ಚೆಲ್ಲಬೇಕು ಸರ್ವೆಯರ್ಸ್ ಅಪಾಯಿಂಟ್ ಮಾಡಿ ಸ್ಕೆಚ್ ಮಾಡಿ ಕಮಿಟಿ ಮುಂದೆ ಕೊಡುತ್ತೀರಾ? ಎರಡನೆಯದು ಒಂದು ಸಣ್ಣ ತಕರಾರು ಆಗಿದೆ. ಕರಾಬ್‌ಗಳನ್ನು ರಿಲೀಸ್ ಮಾಡುವಾಗ ಸಚ್ ಅದರ್ ಲ್ಯಾಂಡ್ ಎಂದು ಹೇಳಿ ಬಿಟ್ಟಿದ್ದೀರಿ. ನಮ್ಮ ಅಸಿಸ್ಟೆಂಟ್

ಕಮೀಷನರ್ ಮತ್ತು ಡೆಪ್ಯೂಟಿ ಕಮೀಷನರ್ ಅದೂ ಒಂದು ಕಾರಣ ಇಟ್ಟುಕೊಂಡು ಇಡೀ ನನ್ನ ಕ್ಷೇತ್ರದಲ್ಲಿ ಕರಾಬ್ ಲ್ಯಾಂಡನ್ನು ರಿಲೀಸ್‌ಮಾಡಲು ಒಪ್ಪುತ್ತಿಲ್ಲ. ಸಚ್ ಅಡರ್ ಲ್ಯಾಂಡ್ ಎಂದು ಒಂದು ಪದವನ್ನು ಅಲ್ಲಿಂದ ತಾವು ಡ್ರಾಪ್ ಮಾಡಬೇಕು. ನೀವು ಹಳ್ಳ ಕರಾಬ್ ಕೊಡುವುದಿಲ್ಲ ಡೇಟ್ ರಿಸರ್ವ್‌ಗೆ ಬರಿಯಲ್ಸ್‌ಗೆ ಕೊಡುವುದಿಲ್ಲ ಎಂದು ಏನು ಹೇಳಿದ್ದೀರಿ, ಅದರ ಕೊನೆ ಪದ ಸಚ್ ಅದರ್‌ಲ್ಯಾಂಡ್ ಅಂದಿರುವುದರಿಂದ ಕರಾಬ್ ಲ್ಯಾಂಡನ್ನು ಅವರು ರಿಲೀಸ್ ಮಾಡುತ್ತಿಲ್ಲ. ಮೂರನೆಯದು ನಾನು ಪದೇ ಪದೇ ಕೇಳಿದ್ದೇನೆ. ವಾಸ್ತವವಾಗಿ ಆಗಿರುವುದು. ಪೆಂಡಿಂಗ್ ಇಟ್ಟುಬಿಟ್ಟಿದ್ದಾರೆ ಸ್ವಾಮಿ. ಡಿಸಿಯವರು ನಾನು ಸರ್ಕಾರಕ್ಕೆ ಬರೆದಿದ್ದೇನೆಂದು, ಎಂಡಾರ್ಸ್ ಮಾಡಿದ್ದಾರೆ ನನಗೆ. ಇದಕ್ಕಾಗಿ ನಾವು ಕುಳಿತುಕೊಂಡು ತೆಗೆದುಕೊಂಡ ತೀರ್ಮಾನಗಳನ್ನು ನಿಮ್ಮ ಡೆಪ್ಯುಟಿ ಕಮೀಷನರ್ ಇದು ಕರಾಬ್ ಲಾಂಡ್ ಇದೆ ನಾನು ರಿಲೀಸ್ ಮಾಡುವುದಿಲ್ಲ ಗೌರ್ನಮೆಂಟಿಗೆ ಕ್ಲಾರಿಪಿಕೇಷನ್ ಕೇಳಿದ್ದೇನೆ ಎಂದು ಹೇಳಿದರೆ ತಾವು ತೀರ್ಮಾನ ತೆಗೆದುಕೊಳ್ಳದಿದ್ದರೆ ಯಾರು ಜವಾಬ್ದಾರರು? ಮೂರನೆಯದು ಎಕ್ಸೈಜ್ ಲ್ಯಾಂಡ್ ಏನಾದರೂ ಬಿಡುಗಡೆ ಮಾಡುತ್ತೀರಾ ಎಂದು ನಾವು ಕೇಳಿದ್ದೆವು. 12, 299 ಎಕರೆ ಎಕ್ಸಸ್ ಲ್ಯಾಂಡ್ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿದೆ. 60 ಪರ್ಸೆಂಟ್ ಅಪ್ಲಿಕೇಷನ್, ಎಕ್ಸೈಜ್ ಇಲಾಖೆಯಲ್ಲಿವೆ ಕೊಡುತ್ತೇವೆ ಇಲ್ಲ ಎಂದು ಒಂದು ಮಾತನ್ನು ತಾವು ಈ ಶಾಸನ ಸಭೆಯಲ್ಲಿ ಹೇಳಿ. ನಾಲ್ಕನೆಯದು ಪ್ರೆಷ್ ಅಪ್ಲಿಕೇಷನ್ ಏನಾದರೂ ಕನ್ಸಿಡರ್ ಮಾಡುತ್ತೀರಾ? ಏಕೆಂದರೆ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಂತ್ರಿಗಳಾಗಿದ್ದಾಗಿನಿಂದಲೂ ಕೇಳುತ್ತಿದ್ದೇವೆ. ಡೇಟ್ ಮುಗಿದ ಮೇಲೆ ಏನು ಅರ್ಜಿಗಳು ಬಂದಿವೆ, ಈಗ ಅಮೆಂಡ್‌ಮಾಡುವ ಕಾಲಕ್ಕೆ ಅದರೂ ಆ ಪ್ರೆಷ್ ಅಪ್ಲಿಕೇಷನ್ಸ್ ಎಂಟರ್‌ಟೈನ್ ಮಾಡುತ್ತೇವೆಂದು ಒಂದು ಮಾತನ್ನು ಹೇಳಿ. 5ನೇಯದು ಮಾನ್ಯ ಸಚಿವರೇ, ಈಗಾಗಲೇ ಹಿಂದೆ ಗ್ರಾಂಟ್ ಆಗಿರುವ ಲ್ಯಾಂಡ್‌ನಲ್ಲಿ ಯಾರೋ ಬಗರ್ ಹುಕ್ಕುಂಗಳು ಮಾಡಿಬಿಟ್ಟಿದ್ದಾರೆ. ಅದನ್ನು ಏನು ಮಾಡಬೇಕೋ ಗೊತ್ತಿಲ್ಲ ನಮ್ಮ ಮುಂದೆ ರೆಕಾರ್ಡ್ ಬಿಲ್ಟ್ ಆಫ್ ಮಾಡುವಾಗ ಗ್ರಾಂಟ್‌ಡ್ ಎಂದು ಇರುತ್ತದೆ. ಪೊಜಿಷನ್‌ನಲ್ಲಿ ಬೇರೆಯವರು ಇರುತ್ತಾರೆ. ಇದಕ್ಕೆಲ್ಲಾ ತಾವು ಗೌರ್ನಮೆಂಟ್‌ನವರು ಸ್ವಲ್ಪ ಕ್ಲಾರಿಪಿಕೇಷನ್ಸ್ ಕೊಟ್ಟು ಮಾಡಬೇಕಾಗುತ್ತದೆ ಮತ್ತೆ ನಮ್ಮ ವತಿಯಿಂದ ಯಾವುವೂ ಅರ್ಜಿಗಳು ಪೆಂಡಿಂಗ್ ಇಲ್ಲ. ಏಕೆಂದರೆ ಬಹಳ ಅರ್ಜಿಗಳು ಪೆಂಡಿಂಗ್ ಇಟ್ಟಿದ್ದೀರಿ ಎಂದು ಕಾಗದ ಬರೆದಿರುವ ಜಾಗ ನನ್ನದು. ಕಮಿಟಿ ಮುಂದೆ ಪುಟ್ ಅಪ್ ಆಗಿರುವ ಯಾವ ಅರ್ಜಿಯನ್ನೂ ಒಂದು ದಿವಸವೂ ನಾವು ಪೆಂಡಿಂಗ್ ಇಟ್ಟಿಲ್ಲ ರೆಕಾರ್ಡ ಬಿಲ್ಟ್ ಅಪ್ ಮಾಡಿಸಿಕೊಳ್ಳುವ ಸ್ಥಿತಿಗೆ ತಂದು ಒಂದಲ್ಲ 50 ಕಮಿಟಿ ಮಾಡಿ.

* ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ಏನು ಈ ಬಿಲ್ ತರುತ್ತಿದ್ದಾರೆ, ಇದನ್ನು ಸ್ವಾಗತ ಮಾಡಿದರೂ ಕೂಡ ಇದು ಬರೀ ಚುನಾವಣೆಯ ಸ್ಟಂಟ್ ಆಗಬಾರದು. ಏಕೆಂದರೆ ಇಷ್ಟು ದಿನ ಕೂಡ ಬಗರ್ ಹುಕ್ಕುಂ ಸಾಗುವಳಿಯನ್ನು ಸಕ್ರಮ ಮಾಡುತ್ತೇವೆ ಆಗಸ್ಟ್ ತಿಂಗಳ ಒಳಗಾಗಿ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡುತ್ತೇವೆ ಎನ್ನತಕ್ಕಂಥ ವಿಷಯವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು, ಮಂತ್ರಿಗಳು

ಅನೇಕ ಸಾರ್ವಜನಿಕ ಸಭೆಗಳಲ್ಲಿ ಕೂಡ ಹೇಳಿದರು. ಆದರೆ ಇಷ್ಟು ದಿನಗಳಾದರೂ ಕೂಡ ಸರ್ವೆಯರ್ಸ್‌ನ್ನು ಅಪಾಯಿಂಟ್ ಮಾಡುವುದಕ್ಕೆ ಸರ್ಕಾರಕ್ಕೆ ಪತ್ರ ಬರೆದರೂ ಕೂಡ ಅದಕ್ಕೆ ಉತ್ತರ ಬರಲಿಲ್ಲ. ಜೊತೆಗೆ ಸ್ಕೇಚ್ ಕೊಡದಿದ್ದರೆ ನಾವು ಮೀಟಿಂಗ್‌ಗೆ ಬರುವಂತೆ ಇಲ್ಲ. ನಾನು ಸರ್ಕಾರಕ್ಕೆ ಒಂದು ಸಲಹೆ ರೂಪದಲ್ಲಿ ಪತ್ರ ಬರೆದಿದ್ದೆ. ಅದೇನೆಂದರೆ ರಿಟೈರ್ಡ್ ಸರ್ವೆಯರ್ಸ್‌ನ್ನು ನೀವು ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡು ಎಲ್ಲಾ ಕಡೆ ಅತಿ ಜರೂರಾಗಿ ಸರ್ವೆ ಮಾಡಿಸುವಂತಹ ಕೆಲಸ ಮಾಡಿ ಎಂದು ಹೇಳಿದ್ದೆ. ಅದರ ಬಗ್ಗೆ ಕೂಡ ತಾವು ಏನೂ ಮಾಡಲಿಲ್ಲ. ನನ್ನ ಕ್ಷೇತ್ರದ ಕೆ ಜಿ ಎಫ್ ನಲ್ಲಿ ಸಿಟಿ ಕಾರ್ಪೊರೇಷನ್ ಮುನಿಸಿಪಾಲಿಟಿ ವ್ಯಾಪ್ತಿಯ 7 ಕಿಲೋಮೀಟರ್ ಒಳಗಡೆ ಯಾವುದೂ ಮಾಡಬಾರದು ಎಂದು ಹೇಳಿದ್ದರು ಅದನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೂಕೂಡ ತಂದಿದ್ದೆ. ಈಗ ಕೆ.ಜಿ.ಎಫ್ ನಗರ ಮುಳುಗುತ್ತಾ ಇರತಕ್ಕಂಥ ನಗರ. ಈಗ ನನ್ನ ಕ್ಷೇತ್ರಕ್ಕೆ ಕೆ ಜಿ ಎಫ್ ಅಕ್ಕಪಕ್ಕದ 92 ಹಳ್ಳಿಗಳು ಸೇರುತ್ತಿವೆ. 92 ಹಳ್ಳಿಗಳು ಸೇರಿದರೂ ಕೂಡ ಅಲ್ಲಿರತಕ್ಕಂಥ ಅನೇಕ ರೈತರಿಗೆ ಬಹಳ ತೊಂದರೆ ಆಗಿದೆ. ಅದನ್ನೂ ಕೂಡ ರಿಲ್ಯಾಕ್ಸ್‌ಮಾಡಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದ್ದೆ. ತಾವು ಕೇಳಲಿಲ್ಲ. ನಾನು ಇದನ್ನು ಚುನಾವಣಾ ಸ್ಟಂಟ್ ಎಂದು ಏತಕ್ಕೆ ಕರೆದೆ ಅಂದರೆ ಈಗ ಅನೇಕರಿಗೆ ನಿಮಗೆ ಎರಡು ಎಕರೆ ಮೂರು ಎಕರೆ ವಿಲೇವಾರಿ ಮಾಡಿದ್ದೇವೆಂದು ಹಕ್ಕುಪತ್ರ ಕೊಟ್ಟು ಪಿಜಿಕಲ್ ಪೊಜಿಷನ್ ನಾನು ಚೆಕ್ ಮಾಡದೆ ರೆಕಾರ್ಡ್‌ನ್ನು ಮತ್ತು ಸ್ಕೆಚನ್ನು ಅಳತೆ ಮಾಡಿದೆ ಅವರಿಗೆ ಏನಾದರೂ ಹಕ್ಕು ಪತ್ರವನ್ನು ಕೊಟ್ಟರೆ ಹಳ್ಳಿಯಲ್ಲಿ ಬೆಂಕಿ ತಗಲಿ ಕಿಚ್ಚು ಇಟ್ಟಂತೆ ಆಗುತ್ತದೆ. ಅದಕ್ಕೆ ಕಾರಣ ಏನೆಂದರೆ ಹಕ್ಕು ಪತ್ರ ಒಬ್ಬರಲ್ಲಿ ಇರುತ್ತದೆ. ಪೊಜಿಷನ್‌ನಲ್ಲಿ ಒಬ್ಬರು ಇರುತ್ತಾರೆ. ಈ ಎರಡಕ್ಕೂ ಕ್ಲಾಷ್ ಆಗತಕ್ಕಂಥ ಕೆಲಸ ಆಗುತ್ತದೆ. ಈ ಕಮಿಟಿಗಳನ್ನು ಮಾಡತಕ್ಕಂಥ ಕೆಲಸ ಸುಮಾರು 4 ತಿಂಗಳ ಹಿಂದೆ ಪ್ರಸ್ತಾಪ ಆಆಯಿತು. ಈಗ ಏನಾಗುತ್ತದೆ ಅಂದರೆ ಈ ಕಮಿಟಿ ಮೆಂಬರ್ಸ್‌ನ್ನು ಮಾಡಲಿಕ್ಕೆ ಒಂದು ಸಂಶಯ ಇದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರಿಯಾದ ರೀತಿಯಲ್ಲಿ ಹಂಚತಕ್ಕಂಥ ಕೆಲಸವನ್ನು ಮಾಡಬೇಕು. ಕಮಿಟಿ ಆಗತಕ್ಕಂಥ ಸಂದರ್ಭದಲ್ಲಿ ಕನಿಷ್ಟ ಲೋಕಲ್ ವ್ಯವಸ್ಥೆಯಲ್ಲಿ ಆಧಾರ ಇಟ್ಟುಕೊಂಡು ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಎಸ್.ಚಿಕ್ಕಮಾದು (ಹುಣಸೂರು):- ಮಾನ್ಯ ಅಧ್ಯಕ್ಷರೇ, ಇವತ್ತು ಏನು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ, ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಒಂದನ್ನು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಟಿ ಟಿ ಹಾಕತಕ್ಕಂಥ ಹಕ್ಕನ್ನು 50ರಿಂದ 500 ರೂಪಾಯಿಗಳವರೆಗೂ ಸ್ಥಳೀಯ ತದಶೀಲ್ದಾರರಿಗೆ ಕೊಟ್ಟಿದ್ದಾರೆ. ಇದರಲ್ಲಿ ಏನು ಅನ್ಯಾಯವಾಗುತ್ತದೆ ಅಂದರೆ ತಹಶೀಲ್ದಾರ್‌ರವರು ಮನಸ್ಸು ಮಾಡಿದರೆ 50 ರೂಪಾಯಿ ಹಾಕಬಹುದು ಇಲ್ಲ ಅಂದರೆ 200 ರೂಪಾಯಿಗಳನ್ನು ಹಾಕಬಹುದು, ಇಲ್ಲ ಅಂದರೆ 500 ರೂಪಾಯಿ ಹಾಕಬಹುದು. ಈಗ ಕಂದಾಯವನ್ನು ಏನು 200ರಿಂದ 50 ರೂಪಾಯಿಗಳಿಗೆ

ತಂದಿದ್ದೇವೆ, ಇದರಿಂದ ನಿಜವಾಗಿಯೂ ಬಡವರಿಗೆ ಅನುಕೂಲವಾಗುತ್ತದೆ. ಅದರೆ ದಂಡವನ್ನು ನಿಖರವಾಗಿ ಹೇಳಲಿಲ್ಲ ಅಂದರೆ ಇದರಿಂದ ರೈತರಿಗೆ ವಂಚನೆ ಆಗುತ್ತದೆ. ದಯವಿಟ್ಟು ಸರ್ಕಾರ ಸ್ಪಷ್ಟವಾಗಿ ಹೇಳಬೇಕು ಎಂದು ತಮ್ಮ ಮೂಲಕ ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಕನಿಷ್ಟ 50 ಎಂದು ಹಾಕುತ್ತೀರಾ 60 ಎಂದು ಹಾಕುತ್ತೀರಾ ಒಂದು ವರ್ಷಕ್ಕೆ ಕನಿಷ್ಟ 50ರಿಂದ 60ಅಂತ ನಿಗದಿ ಮಾಡಿ ದಂಡವನ್ನು ತಾವು ಹಾಕಬೇಕು. ಏಕೆಂದರೆ ಈಗ ಬಗರ್ ಹುಕ್ಕುಂ ಸಾಗುವಳಿ ಮಾಡುತ್ತಾ ಇರತಕ್ಕಂಥವರು 10-15 ವರ್ಷಗಳು ಅಂತ ಇರುತ್ತದೆ ಕನಿಷ್ಟ ನಾವು 50 ಎಂದು ನಿಗದಿ ಮಾಡಿದರೂ ಕೂಡ 10 ವರ್ಷಕ್ಕೆ 500 ರೂಪಾಯಿಗಳು ಆಗುತ್ತದೆ. ಇದು ಬರೀ ದಂಡ. ಅದಕೋಸ್ಕರವಾಗಿ ನಿಖರವಾಗಿ ಅದನ್ನು 50 ಎಂದು ಮಾಡಿ. ಅದರೆ 50ರಿಂದ 500 ರೂಪಾಯಿಗಳವರೆಗೂ ದಂಡ ತಹಶೀಲ್ದಾರರವರು ವಿಧಿಸಬಹುದು ಎಂದು ಕೊಟ್ಟಿರುವ ಅಧಿಕಾರವನ್ನು ತಾವು ಸ್ಪಷ್ಟವಾಗಿ ಒಂದು ವರ್ಷಕ್ಕೆ 50 ಅಥವಾ ನೂರು ಎಂದು ನಿಗದಿ ಮಾಡಬೇಕು. ಕೊನೆಯದಾಗಿನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಏನೆಂದರೆ, ನಿಗದಿತ ಸಮಯದಲ್ಲಿ ಅನೇಕ ಜನ ಅರ್ಜಿಗಳನ್ನು ಸಲ್ಲಿಸಿಲ್ಲ. ಅದಕ್ಕೆ ಹಿಂದಿನ ಕಂದಾಯ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆಯವರು ಒಂದು ಮಾತು ಹೇಳಿದ್ದರು ನಾವು ಆ ದಿನಾಂಕವನ್ನು ವಿಸ್ತರಿಸಿದರೆ ಲಕ್ಷಾಂತರ ಅರ್ಜಿಗಳು ಬರುತ್ತವೆ ಎಂದು ಹೇಳಿದರು. ಅದನ್ನು ತಾವು ವಿಸ್ತರಿಸುವುದು ಬೇಡ. ಆದರೆ ತಾವು ತಾಲ್ಲೂಕು ಲೆವೆಲ್‌ನಲ್ಲಿ ಏನು ಕಮಿಟಿ ಮಾಡಿದ್ದೀರಿ, ಆ ಕಮಿಟಿಗೆ ಆ ಅಧಿಕಾರವನ್ನು ಕೊಟ್ಟರೆ ಯಾರು ನಿಜವಾಗಿಯಾ ಆ ಜಮೀನಿನಲ್ಲಿ ಅನುಭವದಾರರು ಇದ್ದಾರೆ ಎಂದು ಸ್ಥಳ ಪರಿಶೀಲನೆ ಮಾಡಿದರೆ ಅವರಿಗೂ ಕೂಡ ಅನುಕೂಲ ಆಗುತ್ತದೆ. ಇಲ್ಲ ಅಂದರೆ ಆ ಜಮೀನನ್ನು ಬೇರೆಯವರಿಗೆ ಕೊಡುವುದಕ್ಕೂ ಬರುವುದಿಲ್ಲ ಅವರು ಆಗಲೇ ಆ ಜಮೀನಿನಲ್ಲಿ 15-20, ವರ್ಷಗಳಿಂದ ಕುಳಿತುಬಿಟ್ಟಿದ್ದಾರೆ. ಅವರನ್ನು ನಾವು ರೆಗ್ಯುಲರೈಸ್ ಮಾಡಲೇಬೇಕಾಗುತ್ತದೆ. ಆದರೆ ಅಲ್ಲಿ ಒಂದು ಎಡವಟ್ಟು ಏನಾಗಿದೆ ಅಂದರೆ ಆ ಕಾನೂನು ಗೊತ್ತಾಗದೇ ಆ ರೈತ ಅರ್ಜಿ ಸಲ್ಲಿಸಲು ಆಗಿಲ್ಲ. ಅಷ್ಟೇ ಅವನು ತಪ್ಪು ಮಾಡಿರುವುದು ಆದರೆ ಅವನು ಆ ಜಮೀನಿನಲ್ಲಿ ಅನುಭವ ಮಾಡಿಕೊಂಡು ಬರುತ್ತಿದ್ದಾನೆ. ಆದ್ದರಿಂದ ಮಾನ್ಯ ಮಂತ್ರಿಗಳು ದಯವಿಟ್ಟು ತಾವು ಏನು ಸಮಿತಿಗಳನ್ನು ಮಾಡಿದ್ದೀರಿ ಆ ಸಮಿತಿಗೆ ಅಧಿಕಾರ ಕೊಟ್ಟು ಅವರು ಆ ಸ್ಥಳ ಪರಿಶೀಲನೆ ಮಾಡಿ ಅದರ ಅನುಭವದ ಆದಾರದಮೇಲೆ ಸಕ್ರಮಗೊಳಿಸತಕ್ಕಂಥಾದ್ದನ್ನು ಮಾಡಿದರೂ ಕೂಡ ನಿಜವಾಗಿಯಾ 15-20 ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂಥ ವಿಚಾರ ಏನಿದೆ, ಇದನ್ನು ಬಗೆಹರಿಸಲು ಇವತ್ತು ನಮ್ಮ ಸರ್ಕಾರ ಇದನ್ನು ಮಾಡಿರತಕ್ಕಂಥಾ ವಿಚಾರ ಮೆಚ್ಚತಕ್ಕಂಥಾದ್ದು ಎಂದು ಹೇಳಿ ನಾನು ಸರ್ಕಾರದ ಪರವಾಗಿ ಇದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಕೆ.ಸೋಮಪ್ಪ ಸುವರ್ಣ (ಮೂಡ ಬಿದ್ರೆ):- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಯಾವ ತಿದ್ದುಪಡಿಯನ್ನು ತಂದಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ನಮ್ಮಲ್ಲಿ ವಿಲೇಜ್ ಅಕೌಂಟೆಂಟ್‌ರ ಕೊರತೆ ಇದೆ, ಸರ್ವೆಯರ್ಸ್ ಕೊರತೆ ಇರುವುದರಿಂದ ಈ ಕೆಲಸಗಳನ್ನು ಸ್ಪೀಡ್ ಆಗಿ ಮಾಡಲಿಕ್ಕೆ ಆಗಲಿಲ್ಲ ಆದ್ದರಿಂದ ಇದನ್ನು

ಸಮರೋಪಾದಿಯಲ್ಲಿ ಮಾಡಬೇಕಾದರೆ ಪ್ರತಿಯೊಂದು ಗ್ರಾಮಕ್ಕೂ ವಿಲೇಜ್ ಅಕೌಂಟೆಂಟ್ಸ್‌ನ್ನು ಮತ್ತು ಸರ್ವೆಯರ್ಸ್‌ನ್ನು ನೇಮಕ ಮಾಡಿದರೆ ಈ ಕೆಲಸ ಆಗುತ್ತದೆ. ಮತ್ತು ನಮ್ಮದು ಬಹಳ ಕಾಲದ ಕೇಳಿಕೆ ಏನೆಂದರೆ ಯಾವ ಕುಂಕಿ ಭೂಮಿ ಉಂಟು, ಅದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಭೂಮಿ ವಿತರಣೆ ಮಾಡಲಿಕ್ಕೆ ತೊಂದರೆ ಆಗಿದೆ. ಅದಕ್ಕೆ ತಾವು ಏನಾದರೂ ಪರಿಹಾರವನ್ನು ಈ ಸಂದರ್ಭದಲ್ಲಿ ತರಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

* ಶ್ರೀ ವೈ.ಕೆ ರಾಮಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೇ, ನಾನು ತುಮಕೂರು ತಾಲ್ಲೂಕು ಸಮಿತಿಯ ಅಧ್ಯಕ್ಷನಾಗಿದ್ದೇನೆ. ಸನ್ಮಾನ್ಯ ಸಚಿವರು ಏನು ನೆಪ ಹೇಳುತ್ತಾರೋ ನನಗೆ ಗೊತ್ತಿಲ್ಲ. ಆ ಸಮಿತಿಯ ಮುಂದೆ ಬಂದಿದ್ದಂತಹ ನೂರಕ್ಕೆ ನೂರು ಅರ್ಜಿಗಳನ್ನು ತೀರ್ಮಾನ ಮಾಡಿದ್ದೇವೆ. ನನ್ನ ಸ್ನೇಹಿತರಾದ ಆರ್ ನಾರಾಯಣ್ ಮತ್ತು ಶಫಿ ಅಹಮದ್‌ರವರು ಅದಕ್ಕೆ ಸದಸ್ಯರಾಗಿದ್ದರು. ತುಮಕೂರು ತಾಲ್ಲೂಕಿನಲ್ಲಿ ಇದ್ದಂತಹ ಎಲ್ಲಾ ಅರ್ಜಿಗಳನ್ನು ನಾವು ತೀರ್ಮಾನ ಮಾಡಿದ್ದೇವೆ ಸನ್ಮಾನ್ಯ ಮುಖ್ಯಮಂತ್ರಿಗಳು ಸಾಗುವಳಿ ಚೀಟಿಯನ್ನು ಕೊಟ್ಟಿದ್ದೂ ಆಗಿದೆ. ಅವುಗಳನ್ನು ತೀರ್ಮಾನ ಮಾಡುವಂತಹ ಸಂದರ್ಭದಲ್ಲಿ ನನಗೆ ಬಂದ ಕೆಲವು ಅನುಮಾನಗಳನ್ನು ಪರಿಹಾರ ಮಾಡಲಿಕ್ಕೆ ತಮ್ಮಲ್ಲಿ ನಿವೇದನೆ ಮಾಡಲಿಕ್ಕೆ ಇಷ್ಟಪಡುತ್ತೇನೆ. ತುಮಕೂರಿನಲ್ಲಿ ನಾನು ಎಲ್ಲಾ ಬಗೆಹರಿಸಿದೆ. ನನ್ನ ಅದೃಷ್ಟಕ್ಕೋದುರಾದೃಷ್ಟಕ್ಕೋ ಅರ್ಧ ಕುಣಿಗಲ್‌ನಲ್ಲಿ ಇದೆ. ಕುಣಿಗಲ್‌ನಲ್ಲಿ ಸನ್ಮಾನ್ಯಸಚಿವರು ಅದರ ಅಧ್ಯಕ್ಷರು. ನನ್ನ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಯಾವ ಅರ್ಜಿಕೂಡ ಇದುವರೆಗೂ ವಿಲೇವಾರಿ ಆಗಿಲ್ಲ. ಮಂತ್ರಿಗಳಿಗೆ ಕೆಲಸ ಮಾಡಲಿಕ್ಕೆ ಟೈಮ್ ಇಲ್ಲ ಸ್ವಾಮಿ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿ ಸ್ವಾಮಿ ನಾನು 3 ತಿಂಗಳಲ್ಲಿ ತೀರ್ಮಾನ ಮಾಡಿಕೊಡುತ್ತೇನೆ ಬಹಳ ಜನ ನಿಮ್ಮ ಮಂತ್ರಿಗಳು ಅಧ್ಯಕ್ಷರಾಗಿದ್ದಾರೆ ನೀವು ಏನು ಮಾಡಿದ್ದೀರೋ ಗೊತ್ತಿಲ್ಲ. ತಾಲ್ಲೂಕು ಸಮಿತಿಗಳ ಅಧ್ಯಕ್ಷರಾಗಿರಬೇಕು ಜೊತೆಗೆ ಡೆಲ್ಲಿಗೆ ರಾಜಕೀಯ ಮಾಡಲಿಕ್ಕೂ ಹೋಗಬೇಕು. ಇಲ್ಲಿ ಡಿಸಿಡೆಂಟ್ ಅಕ್ಟಿವಿಟೀಸ್‌ನ್ನು ಕಂಟ್ರೋಲ್ ಮಾಡಬೇಕು ಏಕೆ ನಿಮಗೆ ಈ ತೆವಲು? ಇಷ್ಟು ಜನ ಮಂತ್ರಿಗಳನ್ನು ಏಕೆ ಇಟ್ಟು ಕೊಂಡಿದ್ದೀರಿ? ನಿಮ್ಮ ಕೈಯಲ್ಲಿ ಆಗುವುದಿಲ್ಲ ಅಂದರೆ ಇನ್ನೊಬ್ಬರ ಕೈಯಲ್ಲಿ ಆಗುವುದಿಲ್ಲವೇನು? ತುಮಕೂರು ತಾಲ್ಲೂಕಿನಲ್ಲಿ ನಾನು ನೂರಕ್ಕೆ ನೂರರಷ್ಟು ತೀರ್ಮಾನ ಮಾಡಿದ್ದೇನೆ ಕುಣಿಗಲ್ ತಾಲ್ಲೂಕಿನಲ್ಲಿ ಮಂತ್ರಿಗಳು ಅಧ್ಯಕ್ಷರು. ಅವರಿಗೆ ಕಾಲಾವಕಾಶ ಇಲ್ಲ. ಅವರು ಸಭೆ ಕರೆಯುವುದಿಲ್ಲ. ಇದರಿಂದಾಗಿ ಒಂದೇ ಒಂದು ಅರ್ಜಿ ಕೂಡ ಅಲ್ಲಿ ತೀರ್ಮಾನವಾಗುವುದಿಲ್ಲ. ಆದ್ದರಿಂದ ನಾನು ನಿಮಗೆ ಪ್ರಾರ್ಥನೆ ಮಾಡಿ ಕೊಳ್ಳುತ್ತಿದ್ದೇನೆ ಎಲ್ಲೆಲ್ಲಿ ನೀವು ಮಂತ್ರಿಗಳು ಅಧ್ಯಕ್ಷರಾಗಿದ್ದೀರೋ, ಅಲ್ಲಿ ನಿಮಗೆ ಬೇಕಾದ ನಿಮ್ಮ ಶಿಷ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ ಅಥವಾ ಬೇರೆ ಶಾಸಕರೇನಾದರೂ ಇದ್ದರೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಕೆಲಸ ಮಾಡಲು ಅವಕಾಶ ಮಾಡಿಕೊಡಿ. ವಿಶೇಷವಾಗಿ ನನ್ನ ಕುಣಿಗಲ್ ತಾಲೂಕಿನಲ್ಲಿ ಮಂತ್ರಿಗಳಿಗಿರುವ ಅಧಿಕಾರವನ್ನು ಬೇರೆಯವರಿಗೆ ಕೊಟ್ಟು ಅರ್ಜಿಗಳನ್ನು ತೀರ್ಮಾನ ಮಾಡಲು ಅವಕಾಶ ಮಾಡಿಕೊಡಿ. ಮತ್ತೊಂದರ ಬಗ್ಗೆ ನಾನು ತಮಗೆ ಕಾಗದ ಕೂಡ ಬರೆದಿದೇನೆ; ಕೆಲವು ಕಡೆ ಜಮೀನನ್ನು ಒತ್ತುವರಿ ಮಾಡಿ ಹತ್ತಾರು ವರ್ಷಗಳು

ಆಗಿದೆ; ತೆಂಗಿನತೋಟ ಆಗಿದೆ. ಕಾನೂನು ಪ್ರಕಾರ ಅವರಿಗೆ ಮಂಜೂರು ಮಾಡಲು ಆಗುವುದಿಲ್ಲ, ಒಕ್ಕಲೆಬ್ಬಿಸಲೂ ಆಗುವುದಿಲ್ಲ. ಆ ಜಮೀನನ್ನು ಮಾರುಕಟ್ಟೆ ಬೆಲೆಗೆ ನೀವು ಅವರಿಗೆ ಕೊಟ್ಟರೆ ಬೊಕ್ಕಸಕ್ಕೆ ದುಡ್ಡು ಬರುತ್ತದೆ, ಸಮಸ್ಯೆಯನ್ನೂ ಬಗೆಹರಿಸಬಹುದು. ಇಲ್ಲಿ ನಾವು ಕಾನೂನು ಪ್ರಕಾರ ಮಂಜೂರು ಮಾಡುವುದಕ್ಕೂ ಆಗುವುದಿಲ್ಲ, ಅವರನ್ನು ಒಕ್ಕಲೆಬ್ಬಿಸಲೂ ಆಗುವುದಿಲ್ಲ. ಇಲ್ಲಿ ತಹಶೀಲ್ದಾರ್‌ಗೆ ನೀವು ಅಧಿಕಾರ ಕೊಡುತ್ತಿರುವುದನ್ನು ನಾನು ಸ್ವಾಗತಿಸುವುದಕ್ಕೆ ಮೊದಲು, ಒಂದು ಸಂದರ್ಭವನ್ನು ತೆಗೆಸಿನೋಡಿ, ಕುಣಿಗಲ್ ತಾಲೂಕಿನ ತಹಶೀಲ್ದಾರ್ 11-30ಕ್ಕೆ ಸಭೆ ಕರೆದು 1 ಗಂಟೆಗೆ 1300 ಅರ್ಜಿಗಳನ್ನು ತೀರ್ಮಾನ ಮಾಡಿದ್ದಾರೆ. 1 ಗಂಟೆಯಾಳಗೆ 1300 ಅರ್ಜಿಗಳಿಗೆ ನಿಮ್ಮ ಮಂತ್ರಿಗಳ ರುಜು ತೆಗೆದು ಕೊಂಡಿದ್ದಾರೆ. ಡಿಸ್‌ಪೋಸಲ್ ಮಾಡಬೇಕೆಂದರೆ ಕಟ್ಟನ್ನು ಕಟ್ಟಿ ಕೆರೆಗೆ ಹಾಕುವುದಲ್ಲ, ಅಥವಾ ಸುಟ್ಟುಹಾಕುವುದಲ್ಲ, ಡಿಸ್‌ಪೋಸಲ್ ಎಂದರೆ ನ್ಯಾಯವಿತರಣೆ ಮಾಡಬೇಕು. ನೀವು ಮಾಡಿ ಮಾಡಿ ಎಂದು ಒತ್ತಾಯ ಮಾಡಿದರೆ ಅವರು 1300 ಅರ್ಜಿಗಳಿಗೆ ಒಂದು ಗಂಟೆಯಲ್ಲಿ ರುಜು ಮಾಡಿಸಿಕೊಳ್ಳುತ್ತಾರೆ ಅದಕ್ಕಾಗಿ ನಾನು ನಿಮ್ಮಲ್ಲಿ ಪ್ರಾರ್ಥಿಸಿ ಕೊಳ್ಳುತ್ತಿದ್ದೇನೆ, ಈ ಅರ್ಜಿಗಳನ್ನು ವಿಲೇವಾರಿ ಮಾಡಲು ಅಡ್ಡಿ ಏನಿದೆ ಎಂದರೆ ನಿಮ್ಮ ಅಧಿಕಾರಿಗಳು ನೂರಕ್ಕೆ ನೂರು ಸಹಕಾರ ಕೊಟ್ಟರೆ ಅದನ್ನು ಬಗೆಹರಿಸಲಿಕ್ಕೆ ಸಾಧ್ಯವೆಂದು ತುಮಕೂರು ತಾಲ್ಲೂಕಿನ ಎಲ್ಲ ಅರ್ಜಿಗಳನ್ನು ತೀರ್ಮಾನ ಮಾಡಿ ನಾವು ತೋರಿಸಿಕೊಟ್ಟಿದ್ದೇವೆ, ನಿಮ್ಮ ಅಧಿಕಾರಿಗಳು ಸಹಕಾರ ಕೊಡಲಿಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ. ಇನ್ನು ಅಡಿಷನಲ್ ಕಮಿಟಿ ಮಾಡುತ್ತಿರುವುದಕ್ಕೆ ಐದು ಜನ ಸದಸ್ಯರನ್ನು ನೇಮಕ ಮಾಡುತ್ತೇವೆಂದು ಹೇಳುತ್ತಿದ್ದೀರಿ; ದಯಮಾಡಿ ಈ ಐದು ಜನ ನಾಮಿನೇಟ್ ಮಾಡುವವರಲ್ಲಿ ಶಾಸಕರು ಒಬ್ಬರನ್ನಾದರೂ ಮಾಡುತ್ತೀರಾ ಎಂದು ಸ್ವಲ್ಪ ಆಶ್ವಾಸನೆ ಕೊಡಿ.

ಶ್ರೀ ಆರ್.ನಾರಾಯಣ (ಬೆಳ್ಳಾವಿ):- ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾಗಿ ಶ್ರೀ ವೈಕೆ ರಾಮಯ್ಯ ಮತ್ತು ಶ್ರೀ ಚಿಕ್ಕಮಾದು ಅವರುಗಳು ಎತ್ತಿರುವ ಪ್ರಶ್ನೆ ಬಗ್ಗೆ ಸಚಿವರು ಉತ್ತರ ಕೊಡಬೇಕಾಗಿದೆ. ಕಳೆದ ಸದನದಲ್ಲಿ ಈ ಬಗ್ಗೆ ಹತ್ತಾರು ಸಲ ಪ್ರಶ್ನೆಗಳ ಮೂಲಕ ಕಾಲ್ ಅಟೆನಷನ್ ಮೂಲಕ ಗಮನ ಸೆಳೆದಿದ್ದೇವೆ. ನಿಗದಿತ ಕಾಲದಲ್ಲಿ ಅರ್ಜಿ ಹಾಕದೇ ಇರುವವರ ಪರಿಸ್ಥಿತಿ ಏನು? ಈಗ ಅವರದು ತ್ರಿಶಂಕು ಪರಿಸ್ಥಿತಿಯಾಗಿದೆ. ಶ್ರೀ ವೈಕೆ ರಾಮಯ್ಯನವರು ಹೇಳಿದಂತೆ ಕಾನೂನಿನಂತೆ ಬಗರ್‌ಹುಕುಂ ಜಮೀನನ್ನು ಸಕ್ರಮಗೊಳಿಸಲು ಬರುವುದಿಲ್ಲ. ಹೀಗಾಗಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಹಾಗೆಯೇ ಬಿಟ್ಟಿದ್ದಾರೆ. ಇವೆರಡರ ಬಗ್ಗೆ ಸ್ಪಷ್ಟವಾಗಿ ಖಚಿತವಾಗಿ ತಾವು ಉತ್ತರ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ):- ಮಾನ್ಯ ಅಧ್ಯಕ್ಷರೆ, ನಮ್ಮ ಸುರತಕ್ಕಲ್ ಮತ್ತು ಉಳ್ಳಾಲ ಕ್ಷೇತ್ರದಲ್ಲಿ ಮಹಾನಗರ ಪಾಲಿಕೆಯಿಂದ 10 ಕಿಮೀ ವರೆಗಿನ ಯಾವ ಅರ್ಜಿಯನ್ನು ತೆಗೆದುಕೊಳ್ಳಲು ಇಲ್ಲಿಯವರೆಗೂ ಆಗಲಿಲ್ಲ. ಅದಕ್ಕೆ ಏನೋ ಒಂದು ತಡೆ ಉಂಟಿಂತೆ. ಆದ್ದರಿಂದ ಇಂತಹ ಎಷ್ಟೋ ಸಾವಿರ ಅರ್ಜಿಗಳುಂಟು. ಅವನ್ನು ಸಹ ಕೈಗೆತ್ತಿ ಕೊಳ್ಳುವಹಾಗೆ ಮಾಡಿದರೆ ಬಹಳ ಉಪಕಾರವಾಗುತ್ತದೆ ಹಾಗೂ ತುಂಬಾ ಜನರ ಗೋಳು ತಪ್ಪುತ್ತದೆಂದು ಕೇಳುತ್ತಿದ್ದೇನೆ.

ಶ್ರೀ ಎ.ಎಂ.ಬೆಳ್ಳಿಯಪ್ಪ (ಸೋಮವಾರ ಪೇಟೆ):-ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರುವ ಈ ಬಿಲ್ಲನ್ನು ಸ್ವಾಗತಿಸುತ್ತಾ, ನನಗೊಂದು ಸಂಶಯ ಕೂಡ ಆಗುತ್ತದೆ, ಅವರ ಅಭಿಪ್ರಾಯದ ಪ್ರಕಾರ ಈ ಸೆಪ್ಟೆಂಬರ್ ಎಂಡ್‌ವರೆಗೆ ಈ ಎಲ್ಲಾ ಆಕ್ರಮವನ್ನು ಸಕ್ರಮ ಮಾಡಲು ಸಾಧ್ಯವುಂಟೇ ಎಂದು. ಏಕೆಂದರೆ ನನ್ನ ತಾಲ್ಲೂಕು ಹಾಗೂ ಜಿಲ್ಲೆಯಲ್ಲಿ ಹಾಗೂ ಈ ತೊಂದರೆ ಇಡೀ ಮಲೆನಾಡು ಪ್ಲಾಂಟೇಷನ್ ಏರಿಯಾದಲ್ಲೆಲ್ಲಾ ಇದೆ. ನನ್ನ ತಾಲ್ಲೂಕಿನಲ್ಲಿ 6 ಸಾವಿರ ಅರ್ಜಿಗಳನ್ನು ಸಕ್ರಮ ಮಾಡಲು ಕೊಟ್ಟಿದ್ದಾರೆ. ಆದರೆ ಎರಡು ಮೂರು ವರ್ಷದಿಂದ ನಮ್ಮ ಕಮಿಟಿ ಪ್ರತಿವಾರ ಕೂತು ಒಳ್ಳೆಯ ಕೆಲಸ ಮಾಡುತ್ತಿದ್ದರೂ ಇವತ್ತಿಗೆ 1400 ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡಲು ಸಾಧ್ಯ ಆಗಿದೆ. ನಾನು ಬಾಕಿ ಅರ್ಜಿಗಳನ್ನು ಏಕೆ ವಿಲೇವಾರಿ ಮಾಡಲು ಆಗುತ್ತಿಲ್ಲ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಬರೆದಿದ್ದೇನೆ. ನಾನೇ ಅಲ್ಲ, ನಮ್ಮ ಮಲೆನಾಡು ಪ್ಲಾಂಟೇಷನ್ ಏರಿಯಾದ ಶಾಸಕರು ಕೂಡ ಆಗ್ಗಿಂದಾಗ್ಗೆ ನಮ್ಮ ಸಭೆಗಳಲ್ಲಿ ಅಥವಾ ಕಾಗದದ ಮೂಲಕ ಅವರ ಗಮನಕ್ಕೆ ತಂದಿದ್ದೇವೆ, ಮಾನ್ಯ ಕಂದಾಯಸಚಿವರಿಗೂ ಕೂಡ ತಿಳಿಸಿದ್ದೇವೆ. ಅಕ್ರಮ ಜಾಗದಲ್ಲಿ ಎರಡು ಕಾಫಿ ಗಿಡ ಇದ್ದರೂ ಸಾಕು, ಅದನ್ನು ಪ್ಲಾಂಟೇಷನ್ ಏರಿಯಾ ಎಂದು ಈ ಕ್ಯಾಟಗಿರಿಗೆ ತರದೆ ಪೇಪರ್‌ಗಳನ್ನೂ ಅಲ್ಲೇ ಇಟ್ಟುಬಿಡುತ್ತಾರೆ. ಅದಕ್ಕೋಸ್ಕರ ನನ್ನ ಕ್ಷೇತ್ರದಲ್ಲಿ 3600-4000 ಅರ್ಜಿಗಳು ವಿಲೇವಾರಿಯಾಗದೆ ಹಾಗೆಯೇ ಉಳಿದಿವೆ. ಈ ಕಾರಣದಿಂದ ಸೆಪ್ಟೆಂಬರ್ ಅಂತ್ಯಕ್ಕೆ ಇದೆಲ್ಲಾ ತೀರ್ಮಾನವಾಗ ಬೇಕೆಂದು ಇದ್ದರೂ ಕೂಡ ನೀವು ಇನ್ನೊಂದು ಕಮಿಟಿ ಮಾಡಲು ಸಾಧ್ಯವುಂಟೇ ಎಂದು ಕೇಳುತ್ತಿದ್ದೇನೆ. ಅದಕ್ಕಾಗಿ ನಾನು ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುವುದಿಷ್ಟೆ: ಈ ಪ್ಲಾಂಟೇಷನ್‌ನ ಡೇಫನಿಷನ್ ಅನ್ನು ಚೇಂಜ್ ಮಾಡಲು ಈ ಸಕ್ರಮ-ಅಕ್ರಮದ ಬಗ್ಗೆ. ಎರಡು ಕಾಫಿ ಗಿಡ ಇದ್ದರೂ ಕೂಡ ಅದೂ ಸಹ ಇದಕ್ಕೆ ಅನ್ವಯಿಸುತ್ತದೆ ಎಂದು ಮಾಡಿಕೊಳ್ಳಬೇಕೆಂದು ಹೇಳಿ ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ.

* ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು):- ಅಧ್ಯಕ್ಷರೇ, ಚಂದ್ರೇಗೌಡರು ಏನು ಹೇಳಿದ್ದಾರೆ, ಇದು ಇವತ್ತು ಏಕೆ ಪಾಸ್ ಮಾಡಿ ಸೆಪ್ಟೆಂಬರ್‌ನಲ್ಲೇ ಏಕೆ ಮಾಡಬೇಕೆಂಬುದು ಅಲ್ಲ. ಇದನ್ನು ಒಂದು ವರ್ಷದಿಂದ ಚಿಂತನೆ ಮಾಡಿದ್ದೇವೆ. ಈಗಾಗಲೇ ಇದರ ಬಗ್ಗೆ ಸಚಿವ ಸಂಪುಟದಲ್ಲಿ ಕೂಡ ತೀರ್ಮಾನ ಮಾಡಿ ಸೂಕ್ತವಾದ ಅರ್ಡಿನೆನ್ಸ್ ಕೂಡ ಹೊರಡಿಸಿದ್ದೆವು; ಈ ಅರ್ಡಿನೆನ್ಸ್‌ನ್ನು ರಿಪ್ಲೇಸ್ ಮಾಡಲು ಈ ಬಿಲ್ ತಂದಿದ್ದೇವೆ. ಇದು ಮೊದಲಿಗೆ ತರತಕ್ಕದ್ದಲ್ಲ. 1990-91ರಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮ ಗೊಳಿಸುವ ಉದ್ದೇಶ ಸರ್ಕಾರದ್ದು ಬಹಳ ದಿವಸದಿಂದ ಇದ್ದುದು. ಇದನ್ನು ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದಾಗ ಸ್ವಲ್ಪ ನ್ಯೂನತೆ ಇರುವುದನ್ನು ಕೂಡ ಹೇಳಿದರು. ಎಲ್ಲಿಯವರೆಗೂ ಇದರಲ್ಲಿ ಸ್ವಲ್ಪ ತಿದ್ದುಪಡಿ ಮಾಡುವುದಿಲ್ಲ ಅಲ್ಲಿಯವರೆಗೆ ನಾವು ಎಲ್ಲಾ ಕಡೆಗೆ ಕೊಡಲಿಕ್ಕೆ ಆಗುವುದಿಲ್ಲ ಎಂದು. ಇವತ್ತು

ಜಿಲ್ಲಾಧಿಕಾರಿಗಳಿಗೆ ಕೆಲಸ ಇರುತ್ತದೆ, ಅದಕ್ಕಾಗಿ ತಹಸೀಲ್ದಾರ್‌ರವರಿಗೆ ಕೊಡಬೇಕೆಂಬ ಬಗ್ಗೆ ನಾನು ಹೇಳಿದ್ದೇನೆ ತಹಸೀಲ್ದಾರ್‌ಗೆ ಕೊಡುವ ರೀತಿಯಲ್ಲಿ ಸದಸ್ಯರು ಟಿಟಿ ಫೈನ್ ಕೊಡುವವರು ಇದ್ದರೆ ಅಲ್ಲಿ ದುರುಪಯೋಗವಾಗುತ್ತದೆಂದು ಹೇಳಿದ್ದಾರೆ. ಅದರ ಬಗ್ಗೆ ಅಫೀಲಿಗೂ ಅವಕಾಶ ಮಾಡಿದ್ದೇವೆ. ತಾವು ಹೇಳಿದಂತೆ ಅಡಿಷನಲ್ ಕಮಿಟಿಗಳನ್ನು ಎಲ್ಲಾ ಕಡೆ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಈಗಾಗಲೇ 50 ಪರ್ಸೆಂಟ್ ಎಲ್ಲಾ ಕಡೆಗೆ ವಿಲೇವಾರಿಯಾಗಿದೆ. ನಾನು ಬಂದ ಮೇಲೆ ಮೂರ್ನಾಲ್ಕು ಸುತ್ತೋಲೆ ಕಳುಹಿಸಿದ್ದೇನೆ. ಅವು ನಿಮಗೂ ಬಂದಿರಬಹುದು. ಒಂದು ತಿಂಗಳಲ್ಲಿ ನಾಲ್ಕು ಸಲ ಈ ಸಮಿತಿ ಕೊಡಬೇಕು. ಹಾಗೂ ಸಮಿತಿಯಲ್ಲಿ ಕೊರಂ ಇರಬೇಕೆಂಬುದನ್ನು ಕೂಡ ತೆಗದುಹಾಕಿದ್ದೇವೆ; ಒಬ್ಬರು ತಹಶೀಲ್ದಾರ್ ಮತ್ತೊಬ್ಬರು ಸದಸ್ಯರಿದ್ದರೂ ಸಾಕು ಎಂದು ಈ ರೀತಿ ಇತ್ಯರ್ಥ ಮಾಡಬೇಕೆಂದು ಪದೇಪದೇ ಸುತ್ತೋಲೆ ಕೂಡ ಕಳುಹಿಸಿದ್ದೇವೆ. ಆದರೆ ಅತಿರಿಕ್ತವಾಗಿ ಏನೆಂದರೆ ಎಲ್ಲಾ ಕಡೆಗೆ ಪಾರ್ಟಿ ಸಭೆಗಳಲ್ಲಿ ಬೇರೆ ಕಡೆಗಳಲ್ಲಿ ಕಾಗೋಡು ತಿಮ್ಮಪ್ಪನವರ ಜೊತೆ ಸಮಾಲೋಚನೆ, ತಮ್ಮ ಜೊತೆಯಲ್ಲಿಯೂ ಸಮಾಲೋಚನೆ ಆಗಿದೆ. ನಮ್ಮ ವಿರೋಧ ನಾಯಕರು ಕೂಟ್ಟ ಸಜೆಷನ್ ಮೇಲೆ ಇದನ್ನು ತಂದಿದ್ದೇವೆ. ಇದನ್ನು ಸೆಪ್ಟೆಂಬರ್ ಒಳಗೇ ಏನಾದರೂ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಈ ಸೆಕ್ಷನಿಗೆ ತಿದ್ದುಪಡಿ ಮಾಡಿ ಹೆಚ್ಚಿನರೀತಿ ಕಾನೂನಿಗೆ ಅವಕಾಶ ಕೊಡಬೇಕೆಂದು ಗಮನಕೊಟ್ಟಿದ್ದೇವೆ. ಮತ್ತು ಎಲ್ಲಾ ಕಡೆಗೆ ಚುನಾವಣೆ ಬರುತ್ತಿದೆ, ಬೇರೆ ಸದಸ್ಯರನ್ನು ಆಯ್ಕೆ ಮಾಡಬೇಕೆಂದೇನಿಲ್ಲ. ಇಲ್ಲಿಯವರೆಗೆ ಕರ್ನಾಟಕ ರಾಜ್ಯದಲ್ಲಿ 23 ಕಡೆ ಮಾಡಿದ್ದೇವೆ; ಎಲ್ಲೆಲ್ಲಿ ಶಾಸಕರು ಮನವಿ ಕಳಿಸಿದ್ದಾರೆ ಅಲ್ಲಿ ಕೂಡ ಮಾಡಿದ್ದೇವ. ಯಾರಿಗೂ ಕೂಡ ಅಲ್ಲಗೆಳೆಯುವುದು ಇಲ್ಲ. ಶಾಸಕರಿಗೆ ಜನಪ್ರತಿನಿಧಿಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿದ್ದೇವೆ ಮತ್ತೆ ಆದಾಯದ ಬಗ್ಗೆ ಹೇಳಿದ್ದೀರಿ ಅದನ್ನು ತೆಗೆದುಹಾಕಿದ್ದೇವೆ. ಮತ್ತು ಇವತ್ತು ಸರ್ವೇಯರ್ಸ್ ಇಲ್ಲ ಎನ್ನುವುದು ದೊಡ್ಡದು ಏಕೆಂದರೆ 1437 ಜನ ಸರ್ವೇಯರ್ಸ್ ಬೇಕಾಗಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದ್ದು ಅದನ್ನು ಕ್ಯಾಬಿನೆಟ್‌ನಲ್ಲಿ ತಂದು, ಅದಕ್ಕಾಗಿ ಜಿಲ್ಲಾಮಟ್ಟದಲ್ಲಿ ನೇಮಕಾತಿ ಮಾಡಬೇಕೆಂದು ಸಮಿತಿ ಮಾಡಲು ಆದೇಶ ಹೋಗಿದೆ. ಇದಕ್ಕೆ ಸೈನ್ಸ್‌ವಿತ್ ಮ್ಯಾಥ್ಸ್ ನಾಲೆಡ್ಜ್ ಬೇಕು. ಯಾರಾದರೂ ಸರ್ವೆಯರ್ ಡಿಪ್ಲೊಮಾ ಇಲ್ಲದಿದ್ದರೆ ಏನು ಮಾಡಬೇಕು ಎಂಬುದು ನಮ್ಮ ಗಮನದಲ್ಲಿದೆ. ಅದಕ್ಕೆ ಕೂಡ ತಿದ್ದುಪಡಿ ಮಾಡುತ್ತಿದ್ದೇವೆ. ಈಗಾಗಲೇ ಮೈಸೂರಿನಲ್ಲಿ ಆಗುತ್ತಿದೆ. ಆದರೆ ಸರ್ವೇಯರ್ಸ್ ಬರುವತನಕ ಕೂಡಬಾರದು. ರೆವೆನ್ಯೂಸ್ಕೆಚ್ ಮೇಲೆ ಎಲ್ಲಾ ಕಡೆಗೆ ಸಾಗುವಳಿಚೀಟಿ ಕೊಡಬೇಕೆಂದು ಮಾಡಿದ್ದೇವೆ. ಇದಕ್ಕೆ ಮತ್ತೆ ತಾವು ಏನು ಹೇಳಿದ್ದೀರಿ, ಲ್ಯಾಂಡ್‌ಪ್ಯೆಸ್ ಏನಿದೆ 200 ಟೈಮ್ಸ್, ಅದನ್ನು 50 ಟೈಮ್ಸ್ ಮಾಡಿದ್ದು ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಡಬೇಕೆಂಬುದು ಕೂಡ ಪರಿಶೀಲನೆ ಮಾಡೋಣ, ಮತ್ತೆ ನಮ್ಮ ನಾರಾಯಣಸ್ವಾಮಿ ಅವರು ಹೇಳಿದರು, ಎಲ್ಲರಿಗೂ ಪ್ರಾತಿನಿಧ್ಯ ಕೊಡಬೇಕು, ಒಂದೇ ಸಮಿತಿ ಆಗಬಾರದು ಎಂದು ಆ ಧೋರಣೇನೆ ನಮಗಿಲ್ಲ, ಮಾಡುತ್ತೇವೆ. ಈಗ ಇವತ್ತು ತಿದ್ದುಪಡಿ ತಂದಿದ್ದೇವೆ, ಡೇಟುಡೆ

ಇದರಲ್ಲಿ ಬರುವುದನ್ನು ಸಮಕ್ಷಮ ಭೇಟಿಯಾಗಿ ಪರಿಹಾರ ಹುಡುಕೋಣ. ಎಲ್ಲಿ 50 ಸಾವಿರಕ್ಕಿಂತಲೂ ಜನಸಂಖ್ಯೆ ಕಡಿಮೆ ಇದೆ, 5 ಕಿಮೀ ಒಳಗೆ ಇರುವುದು ಕೂಡ 14-5--1990ಕ್ಕೆ ಎಲ್ಲೆಲ್ಲಿ ಸಾಗವಳಿ ಮಾಡುತ್ತಿದ್ದಾರೆ ಅವರಿಗೆ ಗೊತ್ತಿರದೆ ಆಗೆ ಅರ್ಜಿ ಹಾಕಿರಲಿಲ್ಲ. ಈಗ ತಿದ್ದುಪಡಿ ಯಾದ ಮೇಲೆ 3 ತಿಂಗಳು ಅವಕಾಶ ಅವರಿಗೂ ಕೊಡುತ್ತಿದ್ದೇವೆ. 14 ನೇ ಏಪ್ರಿಲ್ 90ಕ್ಕೆ 5 ಕಿಲೋ ಮೀಟರ್ ಒಳಗೆ ಇರತಕ್ಕಂತಹ ವರಿಗೂ ಕೂಡ ಪರ್ಮಿಟ್ ಮಾಡುತ್ತಿದ್ದೇವೆ.

ಶ್ರೀ ಎಂ. ನಾರಾಯಣ ಸ್ವಾಮಿ :- ಕೆ. ಜೆ. ಎಫ್. ಸಿಟಿ ಮುಳುಗುತ್ತಾ ಇದೆ. ಅಲ್ಲಿ ಏನೂ ವ್ಯಾಲ್ಯೂ ಇಲ್ಲ.

ಶ್ರೀ ಧರ್ಮಸಿಂಗ್ :- ನಾವು ಟೇಬಲ್ ಕೊಟ್ಟಿದ್ದೇವೆ. ಎಲ್ಲಿ 18-10 ಕಿಲೋ ಮೀಟರ್ಸ್ ಇದೆ....

ಶ್ರೀ ಎಂ. ನಾರಾಯಣ ಸ್ವಾಮಿ :- ಕೆ ಜೆ ಎಫ್‌ಗೆ ರಿಲ್ಯಾಕ್ಸ್ ಮಾಡಬೇಕು. ಏಕೆಂದರೆ ನನ್ನ ಕ್ಷೇತ್ರದ 92 ಹಳ್ಳಿಗೆ ಪೆಟ್ಟು ಬೀಳುತ್ತಿದೆ. ಆ ರೈತರಿಗೆ ಅವಕಾಶ ಸಿಗುತ್ತಿಲ್ಲ.

ಶ್ರೀ ಧರ್ಮಸಿಂಗ್ :- ಅದನ್ನು ನೋಡೋಣ. ಈಗ ವೈಕೆ.ರಾಮಯ್ಯನವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ ತಮ್ಮ ಮತ ಕ್ಷೇತ್ರದಲ್ಲಿ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಿದ್ದಾರೆ. ಬೇರೆ ಕಡೆ ಆಗಿಲ್ಲವೆಂದು ಏನು ಹೇಳಿದ್ದಾರೆ, ಅದರ ಬಗ್ಗೆ ನೋಡೋಣ. ಒಟ್ಟಾರೆ ಹೇಳತಕ್ಕಂಥಾದ್ದು ಇಲ್ಲಿ ತಾರತಮ್ಯ ಮಾಡುತ್ತಿಲ್ಲ. ಸಾಕಷ್ಟು ಕಾಳಜಿ ವಹಿಸಿದ್ದೇವೆ.

ಶ್ರೀ ಡಿ.ಬಿ.ಚಂದ್ರೇಗೌಡ :- ಕೆಲವು ಕೆಡೆ ಎರಡೆರಡು ತಾಲ್ಲೂಕಿನ ಸಮಸ್ಯೆ ಬರುತ್ತಿದೆ. ಕ್ಷೇತ್ರ ಬೇರೆ, ತಾಲ್ಲೂಕು ಎರಡಾಗುತ್ತದೆ. ಅಂತಹ ಕಡೆ ಕನಿಷ್ಠ ಶಾಸಕರು ಹೇಳಿದ್ದನ್ನು ಒಬ್ಬರಾದರೂ ಸಮಿತಿಯಲ್ಲಿ.....

ಶ್ರೀ ಧರ್ಮಸಿಂಗ್ :- ಮಾಡೋಣ. ಶಾಸಕರು ಹೇಳಿದ್ದನ್ನೂ ಮಾಡೋಣ. ಎಲ್ಲಿ ಈ ರೀತಿ ಆಗಿದೆ, ಅದಕ್ಕೆ ಚೇಂಜ್ ಮಾಡಿ ಮಾಡಿಸಿಕೊಡುತ್ತೇನೆ. ಮಡಕೇರಿಯಲ್ಲಿರತಕ್ಕಂತಹ ಸಮಸ್ಯೆ ಬೇರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ನಾರಾಯಣಸ್ವಾಮಿ ಅವರು ಸರ್ವೇಯರ್ಸ್ ಬಗ್ಗೆ ಹೇಳಿದರು.

ಶ್ರೀ ಆರ್. ನಾರಾಯಣ :- ನಿಗದಿತ ವೇಳೆಯಲ್ಲಿ ಅರ್ಜಿ ಹಾಕಿಲ್ಲ. ಈಗ ಅವರಿಗೆ ಮಂಜೂರು ಮಾಡಲಿಕ್ಕಾಗುವುದಿಲ್ಲ. ಅವರ ಪರಿಸ್ಥಿತಿ ಹೇಗೆ?

ಶ್ರೀ ಧರ್ಮಸಿಂಗ್ :- ಕಟಾಫ್ ಡೇಟ್‌ಅನ್ನು ಎಕ್ಸ್‌ಟೆನ್‌ಷನ್ ಮಾಡುತ್ತಾರೆ. ಇದರಲ್ಲಿ ಅವರು ಸಾಗುವಳಿ ಮಾಡುತ್ತಿದ್ದಾರೆ. ಇದರಲ್ಲಿ ಅರ್ಜಿ ಹಾಕಿಲ್ಲ, ಅಲ್ಲಿ ಪೊಜಿಷನ್‌ನಲ್ಲಿದ್ದರೆ ಏನು ಮಾಡಬೇಕೆಂಬ ಬಗ್ಗೆ ನೋಡೋಣ.

ಶ್ರೀ ಆರ್. ನಾರಾಯಣ :- ಏನಾದರೂ ಹೇಳಬೇಕಲ್ಲಾ. ಕಮಿಟಿಗೆ ಅಧಿಕಾರ ಕೊಡಿ. ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರು ಹೊಸದಾಗಿ ಹಾಕುವುದಕ್ಕೆ ಅವಕಾಶ ಕೊಟ್ಟರೆ ಬೋಗಸ್ ಅರ್ಜಿ ಬರುತ್ತದೆ. ಇದನ್ನು ಮಾಡಬೇಡಿ. ಯಾರು ಮೊದಲಿನಿಂದಲೂ ಮಾಡುತ್ತಿದ್ದಾರೆಂದು ನೋಡಲು ಸಮಿತಿಗೆ ಅಧಿಕಾರ ಕೊಟ್ಟರೆ ಅವರು ಇನ್ಸ್‌ಪೆಕ್ಷನ್ ಮಾಡಿ ತೀರ್ಮಾನ ಮಾಡುತ್ತಾರೆ. ಬಗರ್ ಹುಕುಂನಲ್ಲಿ ಕಾನೂನು ಪ್ರಕಾರ 10-20 ಎಕರೆ ಬಗರ್ ಹುಕುಂ ಮಾಡಿದ್ದಾರೆ. ಕಾನೂನು ಪ್ರಕಾರ ಕೊಡಲಿಕ್ಕೆ ಬರುವುದಿಲ್ಲ. ಲಕ್ಷಾಂತರ ರೂಪಾಯಿಗಳ ಆಸ್ತಿ ಇದೆ. ಅಲ್ಲಿರುವವರನ್ನು ರೆವೆನ್ಯೂ ಆ್ಯಕ್ಟ ಪ್ರಕಾರ ಅವರನ್ನು ಎವಿಕ್ಟ್ ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಮಾರ್ಕೆಟ್ ಪ್ರೈಸ್ ಫಿಕ್ಸ್ ಮಾಡಿ ಅದನ್ನು ಅವರಿಗೇ ಮಂಜೂರು ಮಾಡಿ. ಈ ಎರಡು ಪ್ರಮುಖವಾದ ವಿಚಾರಗಳ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು ಹೇಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್ :- ಇಲ್ಲಿಯವರೆಗೆ 10 ಲಕ್ಷ 86 ಸಾವಿರ ಅರ್ಜಿಗಳು ಬಂದಿವೆ. ಇನ್ನೂ ಸಾಗುವಳಿ ಮಾಡತಕ್ಕಂತಹ ಜನರು ಬಹಳಷ್ಟು ಇದ್ದಾರೆ. ಅವರಿಗೂ ಕೊಡಬೇಕೆಂದು ಹೇಳಿದ್ದಾರೆ. ಇದು ಬಹಳ ದೊಡ್ಡ ಸಮಸ್ಯೆ. ಈಗ ಸರಕಾರದ ಮುಂದೆ ಬಂದಿದೆ. ಇದರ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಎ.ಎಂ. ಬೆಳ್ಳಿಯಪ್ಪ:- ಕಾಫಿ ಪ್ಲಾಂಟೇಷನ್ ಕ್ರಾಪ್ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಕಳೆದ 3 ವರ್ಷಗಳಿಂದ ನಾವು ನಿಮ್ಮ ಹತ್ತಿರ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಬರುತ್ತಿದ್ದೇವೆ. ಆದರೆ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಈ ಅಮೆಂಡ್‌ಮೆಂಟಿನಲ್ಲಿಯಾದರೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್ :- ಮಾಡೋಣ.

ಅಧ್ಯಕ್ಷರು: ಪ್ರಸ್ತಾಪವೇನೆಂದರೆ :- ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1994 ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾಪ ಅಂಗೀಕರಿಸ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು :- ಪ್ರಸ್ತಾಪ ಏನೆಂದರೆ :- ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ : ಅಧ್ಯಕ್ಷರು : ಪ್ರಸ್ತಾಪವೇನೆಂದರೆ ಮೊದಲನೇ ಖಂಡ, ದೀರ್ಘ

ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾಪನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಪ್ರಸ್ತಾಪದ ಅಂಗೀಕಾರ

ಶ್ರೀ ಧರ್ಮಸಿಂಗ್ :- (ಕಂದಾಯ ಮಂತ್ರಿಗಳು) : ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1994 ರ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾಪವೇನೆಂದರೆ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1994 ರ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

6.30 ಪಿ.ಎಂ.

1994 ರ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹೆಚ್.ಎಂ.ರೇವಣ್ಣ (ಕೃಷಿ ಸಚಿವರು) :- ಮಾನ್ಯ ಅಧ್ಯಕ್ಷರೇ ''1994 ರ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ.ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ನಮಗೆ ಇದರ ಬಗ್ಗೆ ಸಂಪೂರ್ಣ ಸ್ವಾಗತ ಇದೆ. ಈ ಮಸೂದೆಯನ್ನು ತಂದಿರುವುದಕ್ಕೆ ನಾನು ಅಭಿನಂದಿಸುತ್ತೇನೆ.

ಶ್ರೀ ಸಿ.ಬೈರೇಗೌಡ :- ನಿಯಮಾವಳಿ ಪ್ರಕಾರ ಅವರ ಸೇಲಿಯೆಂಟ್ ಫೀಚರ್ಸ್‌ನ್ನು ಹೇಳಬೇಕಾಗುತ್ತದೆ. ದಯವಿಟ್ಟು ಹೇಳಿ.

ಶ್ರೀ ಎಲ್ ಆರ್. ಶಿವರಾಮೇಗೌಡ :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ನಾವು ಇದರ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ :- ಮಾನ್ಯ ಅಧ್ಯಕ್ಷರೇ, ಇವರು ಬಯಲು ಸೀಮೆ ಪ್ರಾಧಿಕಾರದ ವಿಧೇಯಕವನ್ನು ಏನು ಮಂಡಿಸಿದ್ದಾರೆ.....

ಅಧ್ಯಕ್ಷರು : - ಇನ್ನು ಅದರ ಬಗ್ಗೆ ವಿವರಣೆಯನ್ನೇ ನೀಡಿಲ್ಲ.